ಶಾಸಕರಾಗಿದ್ದುದು ಕೇವಲ ಐದು ವರ್ಷಗಳಾಗಿದ್ದರೂ ಕೂಡ ಸಾರ್ವಜನಿಕ ಜೀವನದಲ್ಲಿ ಬಹಳ ವರ್ಷಗಳ ಕಾಲ ಇದ್ದಂಥ ಒಬ್ಬ ವ್ಯಕ್ತಿ. ಒಂದು ಪ್ರಾಮಾಣಿಕತೆಗೆ ಒಬ್ಬ ಶಾಸಕ ಹೇಗಿರಬೇಕು ಎನ್ನುವುದಕ್ಕೆ ಅವರು ಆದರ್ಶಪ್ರಾಯರಾಗಿದ್ದರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತಾವು ತಂದಿರುವಂಥ ಸಂತಾಪಸೂಚನೆಗೆ ನಮ್ಮೆಲ್ಲರ ಒಪ್ಪಿಗೆ ಕೂಡ ಇದೆ. ಅವರ ಅಗಲಿಕೆಯ ದುಃಖವನ್ನು ಭರಿಸುವಂಥ ಶಕ್ತಿ ಅವರ ಕುಟುಂಬಕ್ಕೆ ದೊರೆಯಲಿ ಎಂದು ಹಾರೈಸಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಂಚೋಳಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಳಿಕಾಯಿಯವರು 1985ರಲ್ಲಿ ಆರಿಸಿ ಬಂದಾಗಲೂ ಸಹ ಅಂದಿನ ಜನತಾ ಪರಿವಾರ ಅಂದರೆ ಜನತಾ ಪಕ್ಷದಲ್ಲಿ ಅನೇಕ ರೀತಿಯ ಮತಭೇದಗಳು ಇದ್ದವು. ಆ ಮತಭೇದಗಳಲ್ಲಿ ಕೆಲವೊಂದು ಸಲ ಅವರ ವಿರುದ್ಧ ಇದ್ದ ಅಧಿಕಾರಯುಕ್ತ ಗುಂಪೇನಿತ್ತು, ಬಹುಶಃ ಅದರಿಂದಲೇ ಅವರ ರಾಜಕೀಯ ಜೀವನವನ್ನು ಬಲಿ ತೆಗೆದುಕೊಳ್ಳಲಾಯಿತು. ಅವರು ಜನತಾ ಪರಿವಾರ ಬಿಟ್ಟು ಕೊನೆಗೆ ಬಿ.ಜೆ.ಪಿ. ಪಕ್ಷಕ್ಕೆ ಸೇರಿದರು. ಅವರ ಸ್ವಭಾವವೇ ಅಂತಹುದಾಗಿತ್ತು. ಏಕೆಂದರೆ ಅವರು ನೇರನುಡಿಯ ಸ್ವಭಾವ, ಯಾವುದೇ ಮತಭೇದವಿದ್ದರೆ ಅವರ ಎದುರಿಗೆ ಹೇಳುತ್ತಿದ್ದರು. ಆ ದೃಷ್ಟಿಯಿಂದ ಅವರು ಆರಿಸಿ ಬರಲಿಲ್ಲ ಅಥವಾ ಅವರಿಗೆ ಚುನಾವಣೆಗೆ ಸ್ಪರ್ಧಿಸಲಿಕ್ಕೆ ಟಿಕೆಟ್ ಕೊಡಲಿಲ್ಲ. ಅವರಿಗೆ ಮೊದಲು ಯಾರು ಸಪೋರ್ಟ್ ಮಾಡಿದ್ದರೂ ಅವರೇ ಅವರಿಗೆ ಬೆಂಬಲ ನೀಡದೇ ಕಟ್ ಮಾಡಿದರು. ಒಂದು ಸಲ ಮತಭೇದ ಬಂದಾಗ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟು ಮತ್ತೆ ಹಿಂತೆಗೆದುಕೊಂಡಿದ್ದರೂ ಕೂಡ ಅವರು ಆವತ್ತಿನಿಂದ ಮತಭೇದಕ್ಕೆ ಬಲಿಯಾಗಿ ಕೊನೆಗೆ ಬೇರೆ ಪಕ್ಷ ಸೇರಬೇಕಾಯಿತು, ಅಂತಹ ಶಾಸಕರು ವಿಧಾನಸಭೆಯಲ್ಲಿದ್ದರು ಎಂಬುದು ಹೆಮ್ಮೆಯ ವಿಷಯವಾಗಿದೆ. ಇವತ್ತು ಅವರು ಮೃತರಾಗಿರುವುದರಿಂದ ನಮಗೆಲ್ಲಾ ಬಹಳ ದುಃಖವಾಗಿದೆ, ತಾವು ತಂದಂಥ ಈ ಪ್ರಸ್ತಾವನೆಗೆ ನಾವೆಲ್ಲಾ ಸಮರ್ಥಿಸಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದಲ್ಲಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶ್ರೀ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ಕೋರಿಕೆ.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಚರ್ಚೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ 14ನೇ ತಾರೀಖು ಶುಕ್ರವಾರ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿದ್ದೇನೆ. ಅದನ್ನು ಕೊಡುವುದಕ್ಕಿಂತ ಮುಂಚಿತವಾಗಿ ನಾನು ಏತಕ್ಕೋಸ್ಕರ ಕೊಡುತ್ತಾ ಇದ್ದೇನೆ? ಅದಕ್ಕೆ ಕಾರಣಗಳೇನು? ರಾಜಕೀಯ ಒತ್ತಡಗಳು ಮತ್ತು ಸನ್ನಿವೇಶಗಳು ಏನು ಎನ್ನುವುದನ್ನು ಈ ಸದನದಲ್ಲಿ ನಿಮ್ಮ ಅನುಮತಿ ಪಡೆದು ಸದನದ ಎಲ್ಲಾ ಮಾನ್ಯ ಸದಸ್ಯರಿಗೂ ತಿಳಿಸಬೇಕು ಮತ್ತು ರಾಜ್ಯದ ಜನತೆಗೂ ಕೂಡ ತಿಳಿಸಬೇಕೆಂಬ ಉದ್ದೇಶದಿಂದ ನಿಮ್ಮ ಅನುಮತಿಯನ್ನು ಕೋರಿದ್ದೆ. ತಾವು ನಿಯಮಾವಳಿಗಳಲ್ಲಿ ಅವಕಾಶವಿಲ್ಲ ಮತ್ತು ಅಂತಹ ಸಂಪ್ರದಾಯಗಳೂ ಈ ಸದನದಲ್ಲಿ ಇಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ನನಗೆ ಹೇಳಿಕೆ ಕೊಡಲಿಕ್ಕೆ ತಾವು ತಿರಸ್ಕರಿಸಿದ್ದೀರಿ. ಆದರೆ ಈ ಸದನದಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ಎರಡು ಬಾರಿ ಇಂತಹ ಸಂಪ್ರದಾಯಗಳಾಗಿವೆ. ಮೊದಲನೆಯದಾಗಿ, 1953ನೇ ಇಸವಿಯಲ್ಲಿ ನಿಮ್ಮ ಜಿಲ್ಲೆಯವರೇ ಆಗಿದ್ದಂತಹ ದಿವಂಗತ ಕೆ.ವಿ. ಶಂಕರೇಗೌಡರಿಗೆ ಇಲ್ಲಿ ಅವಕಾಶ ಕೊಟ್ಟಿದ್ದಾರೆ. ಎರಡನೆಯದಾಗಿ, 1977ನೇ ಇಸವಿ ಏಪ್ರಿಲ್ ತಿಂಗಳು ಇದೇ ಸದನದಲ್ಲಿ ಶ್ರೀಮತಿ ನಾಗರತ್ನಮ್ಮನವರು ಈ ವಿಧಾನ ಸಭೆಯ ಅಧ್ಯಕ್ಷರಾಗಿದ್ದಾಗ ಕಾಂಗ್ರೆಸ್ ಸದಸ್ಯರಾಗಿದ್ದ ಎಂ.ಆರ್. ಜಯರಾಮ್, ಇವರು ನಮ್ಮ ಸೀತಾರಾಂರವರ ಸಹೋದರರು, ಅವರು ಇಲ್ಲಿ ಹೇಳಿಕೆ ಕೊಡಲಿಕ್ಕೆ ಶ್ರೀಮತಿ ನಾಗರತ್ನಮ್ಮನವರು ಅವಕಾಶ ಕೊಟ್ಟಿದ್ದಾರೆ. ಅದಕ್ಕೆ ದಾಖಲಾತಿ ಕೂಡ ಇದೆ. ಇಲ್ಲಿ ದಾಖಲೆಯೂ ಆಗಿದೆ. ಈಗ ಸಂಪ್ರದಾಯ ಇಲ್ಲವೆಂದು ಹೇಳುವುದು ಸರಿಯಲ್ಲ. ನಿಮಗೆ ಬಹುಶಃ ನಿಮ್ಮ legislatureನವರು ಸರಿಯಾದ ರೀತಿಯಲ್ಲಿ ಮಾಹಿತಿ ಕೊಟ್ಟಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ಆಗಿರತಕ್ಕಂಥ ಘಟನೆಗಳನ್ನು ಸರಿಯಾಗಿ ತಿಳಿಸಿಲ್ಲ, ಸಂಪ್ರದಾಯ ಇದೆ ಎಂಬುದನ್ನು ಹೇಳಿಲ್ಲ. ನನ್ನಲ್ಲಿರತಕ್ಕ ದಾಖಲಾತಿಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ, ತಾವು ಬೇಕಾದರೆ ನೋಡಿ. ಎಂ.ಆರ್. ಜಯರಾಮ್‌ರವರು ಹೇಳಿಕೆ ಕೊಡಲಿಕ್ಕೆ ಅಂದಿನ ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಶ್ರೀಮತಿ ನಾಗರತ್ನಮ್ಮನವರು ಅವಕಾಶ ಮಾಡಿಕೊಟ್ಟಿದ್ದಾರೆ ಮತ್ತು ಅವರು ಹೇಳಿಕೆಯನ್ನೂ ಕೂಡ ಮಾಡಿದ್ದಾರೆ. ಇದು ಒಂದು ಸಂಪ್ರದಾಯ. ಬೇರೆ ಬೇರೆ ವಿಧಾನ ಸಭೆಗಳಲ್ಲೆಲ್ಲಾ ಆಗಿವೆ. ಆಂಧ್ರದಲ್ಲಿ ನಾಗಿರೆಡ್ಡಿ ಎಂಬುವವರು ಅವರ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು, ರಾಜಕಾರಣದಿಂದ ಅವರು ಬೇರೆ ಹೋರಾಟದ ಆರ್ಮ್ ನಾನು ಸ್ವೀಕಾರ ಮಾಡುತ್ತೇನೆ, ಪ್ರಜಾಪ್ರಭುತ್ವದಲ್ಲಿ ನಾವು ಜನರಿಗೆ ನ್ಯಾಯ ಒದಗಿಸುವುದಕ್ಕಾಗುವುದಿಲ್ಲ, ನಾವು ಯಾವ ತತ್ವ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿದ್ದೇವೆ, ಜನರಿಗೆ ಯಾವ ಮಾತುಗಳನ್ನು ಕೊಟ್ಟಿದ್ದೇವೆ, ಅವುಗಳನ್ನೆಲ್ಲಾ ಈಡೇರಿಸುವುದಕ್ಕಾಗುವುದಿಲ್ಲ, ಸಮಾಜದಲ್ಲಿ ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ, ನಾನು ಆರ್ಮ್, ಶಸ್ತ್ರಾಸ್ತ್ರಗಳನ್ನು ಸ್ವೀಕಾರ ಮಾಡುತ್ತೇನೆ, ಆ ಮೂಲಕ ಹೋರಾಟ ಮಾಡುತ್ತೇನೆ ಎಂದು ಶ್ರೀಮಾನ್ ನಾಗಿರೆಡ್ಡಿಯವರು ಆಂಧ್ರ ವಿಧಾನ ಸಭೆಯಲ್ಲಿ ಹೇಳಿರತಕ್ಕ ನಿದರ್ಶನಗಳೂ ಇವೆ. ಆದ್ದರಿಂದ, ನನಗೆ ನೀವು ಅವಕಾಶ

ಕೊಡುವುದರಿಂದ ದೊಡ್ಡ ಅನ್ಯಾಯವೇನೂ ಆಗುವುದಿಲ್ಲ ಅಥವಾ ಸಮಾಜಕ್ಕೆ ಬಹಳ ಕೆಟ್ಟ ಸಂದೇಶ ರವಾನೆ ಆಗತಕ್ಕಂಥದ್ದೇನೂ ಇಲ್ಲ. ಈ ರಾಜ್ಯಕ್ಕೆ ಕೆಟ್ಟ ಸಂದೇಶ ರವಾನೆ ಆಗಿಬಿಡುತ್ತದೆ ಎನ್ನತಕ್ಕಂಥದ್ದೇನೂ ಇಲ್ಲ. ಆ ಕಾರಣದಿಂದ ಇಂತಹ ಒಳ್ಳೆಯ ಸಂಪ್ರದಾಯಗಳು ಇರಬೇಕಾಗುತ್ತದೆ. ಇವತ್ತು ನಾನೂ ಕೂಡ ಈ ರಾಜಕೀಯ ಕ್ಷೇತ್ರದಲ್ಲಿ ಕಳೆದ 25–30 ವರ್ಷಗಳಿಂದ ಇದ್ದೇನೆ. ಜನರ ಆಶೀರ್ವಾದದಿಂದ ನಾಲ್ಕು ಬಾರಿ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದೇನೆ, ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ, ಹಣಕಾಸಿನ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದೇನೆ, ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಿದ್ದೇನೆ. ನಾನು ಗೆದ್ದು ಬಂದಿರತಕ್ಕಂಥ ಪಕ್ಷಕ್ಕೆ ಮತ್ತು ನನ್ನ ಶಾಸಕ ಸ್ಥಾನಕ್ಕೆ ಇವತ್ತು ಏಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂಬುದನ್ನು ನಾನು ಈ ಸದನಕ್ಕೆ ತಿಳಿಸದೆ ಹೋದರೆ, ಈ ರಾಜ್ಯದ ಜನತೆಗೆ ತಿಳಿಸದೆ ಹೋದರೆ ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಆ ಕಾರಣದಿಂದ ದಯಮಾಡಿ ಮತ್ತೊಮ್ಮೆ ನಾನು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ನಿಮ್ಮ ತೀರ್ಪನ್ನು ಬದಲಾವಣೆ ಮಾಡಿ ನನಗೆ ಇಲ್ಲಿ personal explanation ಅನ್ನು ನಿಯಮ 332ರ ಪ್ರಕಾರ ಕೊಡಲಿಕ್ಕೆ ಅವಕಾಶ ಮಾಡಿಕೊಡಿ. ಅವತ್ತು ನಿಯಮ 293ರ ಪ್ರಕಾರ personnal explanation ಕೊಡಲಿಕ್ಕೆ ಅವಕಾಶ ಇದೆ ಎಂದು ಪರ್ಮಿಷನ್ ಕೊಟ್ಟಿದ್ದಾರೆ. ಆ ಕಾರಣದಿಂದ ನೀವು ನಿಯಮ 332ರಲ್ಲಿ personal explanation ಕೊಡಲಿಕ್ಕೆ ಅವಕಾಶ ಕೊಡಿ. 332 is an independent rule. ಅದು ಯಾವುದರ ಮೇಲೆಯೂ ಅವಲಂಬನೆಯಾಗಿರತಕ್ಕಂಥ ರೂಲ್ ಅಲ್ಲ. ಆ ಕಾರಣದಿಂದ, since it is an independent rule, ನೀವು ಆ ರೂಲ್ ಕೆಳಗಡೆ ಕೊಡಬಹುದು. ಒಂದು ವೇಳೆ ಆ ರೂಲ್ ಇಲ್ಲವೆಂದು ಅಂದುಕೊಂಡರೂ ಕೂಡ, if you come to the conclusion, ಆ ರೂಲ್ ಕೆಳಗಡೆ ಬರುವುದಿಲ್ಲ, ಏಕೆಂದರೆ ನಮ್ಮ ಮಾನ್ಯ ಸಂಸದೀಯ ಮಂತ್ರಿಗಳು, ಯಾರಾದರೂ ಸದಸ್ಯರುಗಳ ಮೇಲೆ ಆರೋಪ ಮಾಡಿದಾಗ, ಅವರು personal explanation ಕೊಡಬೇಕಾಗಿ ಬಂದಾಗ ಅದು ಬರುತ್ತದೆ ಎಂಬುದಾಗಿ ಹೇಳಿ ವ್ಯಾಖ್ಯಾನ ಮಾಡಿದ್ದಾರೆ. ನನ್ನ ಪ್ರಕಾರ ಅದು independent rule ಆಗಿರುವುದರಿಂದ, ಅದು ಬರೀ ಅಷ್ಟಕ್ಕೇ ಸೀಮಿತವಾಗಿಲ್ಲ. ಅದರ ವ್ಯಾಪ್ತಿ ದೊಡ್ಡದಾಗಿದೆ. ಆ ಕಾರಣದಿಂದ ನನಗೆ explanation ಕೊಡಲಿಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ನಾನು ಆಗಲೇ ರೂಲಿಂಗ್ ಅನ್ನು ಕೊಟ್ಟಿದ್ದೇನೆ. ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಈಗ 330(ಎ)ನಲ್ಲಿ personal explanation ಎನ್ನತಕ್ಕಂಥ ರೂಲ್ಸ್ ಏನಿದೆ, ಅದರ ಮೇಲೆ ಕೌಲ್ ಅಂಡ್ ಶಕ್ಧರ್‌ನಲ್ಲಿ ಏನು ಭಾಷ್ಯ ಮಾಡಿದ್ದಾರೆ, ಯಾವ ಸಂದರ್ಭದಲ್ಲಿ ಅದನ್ನು ಉಪಯೋಗಿಸಬಹುದು, ಯಾವ ಸಂದರ್ಭದಲ್ಲಿ ಸ್ಪೀಕರ್‌ರವರು ಅವಕಾಶ ಕೊಡಬಹುದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ತಮಗೆ ಹೇಳಿದ್ದೇನೆ. ಅದಲ್ಲದೆ, ಹಿಂದೆ ಅನೇಕ ಬಾರಿ

ಲೋಕಸಭೆಯಲ್ಲಿ ಕೆಲವು ಸದಸ್ಯರು ರಾಜೀನಾಮೆ ಕೊಟ್ಟು, ಆ ಸಂದರ್ಭದಲ್ಲಿ ಒಂದು personal statement ಮಾಡುವುದಕ್ಕೆ ಅವಕಾಶ ಕೇಳಿದಾಗಲೂ ಸಹ, ಲೋಕಸಭೆಯವರು ಅದನ್ನು ನಿರಾಕರಣೆ ಮಾಡಿದ್ದಾರೆ. ಆ ಕಾರಣದಿಂದ ನಾನು ಏನು ರೂಲಿಂಗ್ ಕೊಟ್ಟಿದ್ದೇನೆ, ಅದು ಸಕಾರಣವಾಗಿದೆ ಎಂದು ನಾನಾದರೂ ಕೂಡ ಭಾವಿಸುತ್ತೇನೆ. On 2nd March 1988, a Member Dr. Chinta Mohan submitted that he was resigning from the Membership of Lok Sabha and he handed over a letter to that effect to the Speaker in the House. When a Member, Kumari Mamtha Banerjee and some other members wanted to know the reasons of the resignation and requested that Dr. Chintha Mohan be allowed to make a statement, Speaker observed that only Minister could be allowed to make a statement. ಆದ್ದರಿಂದ, ಸದಸ್ಯರುಗಳಿಗೆ ನಿಯಮಾವಳಿಗಳ ಪ್ರಕಾರ ಸ್ಟೇಟ್‌ಮೆಂಟ್ ಮಾಡತಕ್ಕಂಥ ಅವಕಾಶವಿಲ್ಲ ಎಂದು ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇಲ್ಲಿ Precedent ಇದೆ. ಪಾರ್ಲಿಮೆಂಟ್‌ನಲ್ಲಿ ಕೊಟ್ಟಿಲ್ಲ, ರಾಜಾಸ್ಥಾನ ಅಸೆಂಬ್ಲಿಯಲ್ಲಿ ಕೊಟ್ಟಿಲ್ಲ, ಮಧ್ಯಪ್ರದೇಶದ ಅಸೆಂಬ್ಲಿಯಲ್ಲಿ ಕೊಟ್ಟಿಲ್ಲ, ರಾಜ್ಯಸಭೆಯಲ್ಲಿ ಕೊಟ್ಟಿಲ್ಲವೆಂದು ಹೇಳುವುದು ಸಕಾರಣವಲ್ಲ. ನಮಗೆ ಇಲ್ಲಿ ಒಂದು ಸಂಪ್ರದಾಯ ಹಾಕಿಕೊಟ್ಟಿದ್ದಾರೆ. ಈ ಸಂಪ್ರದಾಯ ರಾಜ್ಯಾಂಗಕ್ಕೆ, ಸಂವಿಧಾನಕ್ಕೆ ವಿರೋಧವಾಗಿರತಕ್ಕಂಥದ್ದೇನೂ ಅಲ್ಲ. ನಿಯಮಾವಳಿಗಳಿಗೆ ವಿರೋಧವಾಗಿರತಕ್ಕಂಥದ್ದೇನೂ ಅಲ್ಲ. ಒಂದು ವೇಳೆ ನಿಯಮಾವಳಿ ಇಲ್ಲದೆ ಹೋದರೂ ಕೂಡ, ಹೊಸ ಸಂಪ್ರದಾಯಗಳನ್ನು ಹಾಕಲಿಕ್ಕೆ ಅವಕಾಶಗಳು ಇವೆ. But, there is a case. There is a precedent Mr. M.R. Jayaram was allowed to make a statement by the then Speaker. ಹಾಗಿರುವಾಗ, ಪಾರ್ಲಿಮೆಂಟ್‌ನಲ್ಲಿ ಕೊಟ್ಟಿಲ್ಲ, ಅದಕ್ಕೋಸ್ಕರವಾಗಿ ನನ್ನ ನಿರ್ಣಯ ಸರಿಯಾಗಿದೆ ಎಂದು ಹೇಳುವುದು ಬೇಡ. ದಯವಿಟ್ಟು ತಮ್ಮ ruling ಅನ್ನು re-consider ಮಾಡಬೇಕು, review ಮಾಡಬೇಕು. ನನಗೆ ಅವಕಾಶ ಮಾಡಿಕೊಡಬೇಕೆಂದು ಮತ್ತೆ ಮತ್ತೆ ಕೇಳುತ್ತಿದ್ದೇನೆ. ಇಲ್ಲದೇ ಹೋದರೆ, ಈಗಾಗಲೇ ನಾವೇನು ಇಲ್ಲಿ ಒಳ್ಳೆಯ ಸಂಪ್ರದಾಯಗಳನ್ನು ಹಾಕಿದ್ದೇವೋ, ಆ ಸಂಪ್ರದಾಯಗಳನ್ನು ಗಾಳಿಗೆ ತೂರಿದಂತಾಗುತ್ತದೆ. ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ಆ ಕಾರಣದಿಂದ ಮತ್ತೆ ನಾನು ನಿಮ್ಮ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ದಯವಿಟ್ಟು ನನಗೆ ಅವಕಾಶ ಮಾಡಬೇಕು. ಇದರಿಂದ ಏನು ಅನಾಹುತವಾಗುತ್ತದೋ ಗೊತ್ತಿಲ್ಲ, ನೀವೇ ಹೇಳಿ. Let me know. What wrong message will go to the people if you allow me to make a statement?

ಅಧ್ಯಕ್ಷರು : ಈಗ ಶ್ರೀ ಎಂ.ಆರ್. ಜಯರಾಮ್‌ರವರು ರಾಜೀನಾಮೆ ಕೊಟ್ಟಾಗ ಇಲ್ಲಿ ಇದೇ ಹೌಸ್‌ನಲ್ಲಿ ಆಗ ಸ್ಪೀಕರ್ ಆಗಿದ್ದಂತಹ ಶ್ರೀಮತಿ ನಾಗರತ್ನಮ್ಮನವರು ಕೊಟ್ಟಿದ್ದಾರೆ ಅವಕಾಶ ಎನ್ನುವ ಒಂದು ಉದಾಹರಣೆ ಕೊಟ್ಟು ಕಳುಹಿಸಿದ್ದೀರಿ. ಆ ಸಂದರ್ಭದಲ್ಲಿ ಯಾವುದೇ ರೀತಿಯ ಚರ್ಚೆಯಾಗಿಲ್ಲ. ಆಗ ನಿಯಮ 293.....

ಶ್ರೀ ಆರ್.ವಿ. ದೇಶಪಾಂಡೆ : ಅವರು ಪರ್ಸನಲ್ ಸ್ಟೇಟ್‌ಮೆಂಟ್ ಕೇಳುತ್ತಿದ್ದಾರೆ..... ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ... ಯಾರೂ ಭಾಗವಹಿಸುವುದಿಲ್ಲ. ಅವರೊಬ್ಬರೇ statement ಮಾಡುತ್ತಾರೆ.

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೇ, ಎರಡು ನಿಮಿಷ. ತಾವು ತಮ್ಮ ಗಮನ ಈ ಕಡೆ ಕೊಡುವುದಾದರೆ, ಸಾಮಾನ್ಯವಾಗಿ ನಮ್ಮ ಸದನದಲ್ಲಿ ಮಂತ್ರಿಗಳಾಗಿರತಕ್ಕಂಥವರು ರಾಜೀನಾಮೆ ಕೊಟ್ಟರೆ ಅವರು ಅಪೇಕ್ಷೆಪಟ್ಟರೆ ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡುತ್ತೇವೆ. ಆದರೆ ಸದಸ್ಯರಿಗೆ ಅವಕಾಶ ಕೊಡುವುದಿಲ್ಲ ಎನ್ನುವ ಮಾತು ನಿಜ. 1977ನೇ ಇಸವಿಯಲ್ಲಿ ಶ್ರೀಮಾನ್ ಜಯರಾಮ್‌ರವರದ್ದು ಒಂದು ಇನ್‌ಸ್ಟೆನ್ಸ್ ಇದೆ. ತಾವು ಬೇಕಾದರೆ ಅದರ ಪೂರ್ಣ ಮಾಹಿತಿಯನ್ನು ಓದಿಕೊಳ್ಳಿ. ಆ ಸಂದರ್ಭ ಈ ಸಂದರ್ಭ ಏನೂ ವ್ಯತ್ಯಾಸ ಇಲ್ಲ. ಅವರು ಯಾವ ಪಕ್ಷದ ವತಿಯಿಂದ ಆರಿಸಿ ಈ ಸಭೆಗೆ ಬಂದಿದ್ದರು ಆ ಪಕ್ಷದ ಜೊತೆಗೆ ತಮ್ಮ ಸಂಬಂಧ ಕಡೆದುಕೊಳ್ಳುವುದಕ್ಕೆ ಅವರು ನಿರ್ಧಾರ ತೆಗೆದುಕೊಂಡಾಗ ನಾನು ಆ ಪಕ್ಷದ ವತಿಯಿಂದ ಈ ಸದನಕ್ಕೆ ಬಂದಿದ್ದೆ, ನನ್ನದೇ ಆದ ಕಾರಣಗಳಿಗೆ ಆ ಪಕ್ಷದ ಸಂಬಂಧ ಕಡಿದುಕೊಳ್ಳುತ್ತಿದ್ದೇನೆ. ಆದ್ದರಿಂದ ನನಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವುದಕ್ಕೆ ಅವಕಾಶ ಕೊಡಬೇಕು ಅಂತ ಹೇಳಿ ಅಂದಿನ ಅಧ್ಯಕ್ಷರ ಅಪ್ಪಣೆಯನ್ನು ಕೇಳುತ್ತಾರೆ. ಆಗ ಅಂದಿನ ಅಧ್ಯಕ್ಷರೂ ಕೂಡ ಆ ಬಗ್ಗೆ ವಿಚಾರಣೆ ಮಾಡಿ ಅವಕಾಶ ಮಾಡಿ ಕೊಟ್ಟಿದ್ದಾರೆ. ರೂಲ್ಸ್‌ಗಿಂತ ಮಿಗಿಲಾದ ಇದು ಒಂದು ಆಯಾಮ ಇದೆ. ಈ ಬಗ್ಗೆ ಮಾನ್ಯ ಪ್ರಕಾಶ್‌ರವರು ಮೆಚ್ಚುತ್ತಾರೆಂದು ನಾನು ಭಾವಿಸುತ್ತೇನೆ. ರಾಜಕಾರಣ ನಿಂತ ನೀರಲ್ಲ. ಇದು ಸದಾ ಹರಿಯುವ ನೀರು. ದಿನದಿಂದ ದಿನಕ್ಕೆ ಮೌಲ್ಯಗಳು ಬೇಡಿಕೆಗಳು ವಾತಾವರಣಗಳು ಬದಲಾಗುತ್ತಿರುತ್ತವೆ. ಶ್ರೀಮಾನ್ ತಿರುಮಲ ನಾಗೀರೆಡ್ಡಿಯವರ ವಿಚಾರ ಅವರು ಹೇಳಿದರು. ಗೆಳೆಯ ಶ್ರೀರಾಮರೆಡ್ಡಿಯವರು ಒಪ್ಪುತ್ತಾರೆಂದು ಕಾಣುತ್ತದೆ. ಶ್ರೀಮಾನ್ ತಿರುಮಲ ನಾಗೀರೆಡ್ಡಿಯವರು ಈ ರಾಷ್ಟ್ರ ಕಂಡಂತಹ ಅತ್ಯುತ್ತಮ ಮಾರ್ಕ್ಸ್‌ವಾದಿ ಕಮ್ಯುನಿಸ್ಟರು ಅವರು. ಅವರು ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡು 2–3 ಚುನಾವಣೆಗಳಲ್ಲಿ ಗೆದ್ದು ಬಂದು ವಿಧಾನ ಸಭೆಯಲ್ಲಿ ಇದ್ದು, ಲೋಕಸಭೆಗೂ ಗೆದ್ದಿದ್ದರು. ಅವರಿಗೆ ಈ ಸಂಸದೀಯ ಪ್ರಜಾಪ್ರಭುತ್ವದ ಮುಖಾಂತರ ಶೋಷಿತ ಜನಾಂಗಕ್ಕೆ ನ್ಯಾಯ ದೊರಕಿಸುವುದು ಸಾಧ್ಯವಿಲ್ಲ ಎಂದು

ಒಂದು ಅಖೈರು ತೀರ್ಮಾನಕ್ಕೆ ಅವರು ಬರುತ್ತಾರೆ. ಅದು ಅವರ ಸಿದ್ಧಾಂತ. ವಿಧಾನಸಭೆಯ ಒಳಗೆ ನಿಂತು ನಾನು ಈ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯನ್ನು ಕಳೆದುಕೊಂಡವನು ಆಗಿದ್ದೇನೆ. ಇಷ್ಟು ದಿವಸ ನನ್ನನ್ನು ಈ ವ್ಯವಸ್ಥೆಯಲ್ಲಿ ಕೆಲಸ ಮಾಡುವುದಕ್ಕೆ ಸಹಕರಿಸಿದವರೆಲ್ಲರಿಗೂ ನನ್ನ ಕೃತಜ್ಞತೆಗಳು. ನಾನು ಈ ಸದನದಿಂದ ಹೊರಗೆ ಹೋಗಿ ಶಸ್ತ್ರಾಸ್ತ್ರಗಳನ್ನು ಕೈಗೆ ತೆಗೆದುಕೊಂಡು Arms Struggle ಮಾಡಿ ಕ್ರಾಂತಿ ಮಾಡಿ ಈ ದೇಶದಲ್ಲಿ ನಾನು ಸುಧಾರಣೆಯನ್ನು ತರಬೇಕೆಂದು ನಿಶ್ಚಯ ಮಾಡಿಕೊಂಡಿದ್ದೇನೆಂದು ಹೇಳಿ ಹೋಗುತ್ತಾರೆ. ಅದು ಒಂದು ಅವರ ಐಡಿಯಲಾಜಿಕಲ್ ಸ್ಟ್ಯಾಂಡ್, ಮಾನ್ಯ ಸಿದ್ದರಾಮಯ್ಯನವರನ್ನು ಒಬ್ಬ ಶಾಸಕರು ಅಂತ ನಾವು ಪರಿಗಣಿಸಬೇಕಾಗಿಲ್ಲ. ಕಳೆದ 10–15, 20 ವರ್ಷಗಳಿಂದ ಅವರು ಸಾರ್ವಜನಿಕ ಜೀವನದಲ್ಲಿ ಹಲವಾರು ಹುದ್ದೆಗಳಲ್ಲಿ ಹಲವು ಹತ್ತು ಸ್ಥಾನಗಳನ್ನು ಅಲಂಕರಿಸಿ ಅವರ ಕ್ಷೇತ್ರದ ವ್ಯಾಪ್ತಿಗೆ ಮೀರಿದಂತಹ ಒಂದು ವ್ಯಕ್ತಿತ್ವವನ್ನು ಅವರು ಬೆಳೆಸಿಕೊಂಡಿದ್ದಾರೆ. ಅವರಿಗೆ ಅವರು ಆರಿಸಿ ಬಂದ ಪಕ್ಷದಿಂದ ಅವರು ತೆಗೆದುಕೊಂಡಂತಹ ನಿಲುವುಗಳ ವಿಚಾರದಲ್ಲಿ ಬಂದಂತಹ ಮನಸ್ತಾಪಗಳಿಂದಾಗಿ, ಅವರು ಅಧಿಕಾರ ತ್ಯಾಗ ಕೂಡ ಮಾಡಿದ್ದಾರೆ. ಮೊದಲು ನಮಗೆ ಈ ಆಂಟಿಡಿಫೆಕ್ಷನ್ ಇರಲಿಲ್ಲ. ನಮಗೆ ಬೇಡ ಅಂದರೆ ನಾವು ಇನ್ನೊಂದು ಪಾರ್ಟಿಗೆ ಹೋಗಿ ಕುಳಿತುಕೊಳ್ಳಬಹುದಿತ್ತು. ಇವತ್ತು ನಮಗೆ ಆ ನಿರ್ಭಂದವೂ ಇದೆ. ನೈತಿಕವಾಗಿ ಕೂಡ ಅವರು ಎಲ್ಲಿ ತಾವು ಆರಿಸಿ ಬಂದಿದ್ದೇವೆ ಮೂಲವಾಗಿ ಯಾರ ಜೊತೆ ಅವರಿಗೆ ಸೈದ್ಧಾಂತಿಕವಾದ ಭಿನ್ನಾಭಿಪ್ರಾಯ ಬಂದಿದೆ, ಆ ವಿಚಾರವನ್ನು ನನ್ನನ್ನು ಪ್ರೀತಿಸುವವರಿಗೆ ನನ್ನನ್ನು ಮೆಚ್ಚುವವರಿಗೆ, ಅನುಸರಿಸುವವರಿಗೆ, ನನ್ನನ್ನು ಆದರ್ಶಿಸತಕ್ಕಂಥವರಿಗೆ ವಿಷಯ ತಿಳಿಸಬೇಕಾಗಿದೆ. ನಾನು ಏಕೆ ಬಿಟ್ಟು ಹೋಗುತ್ತಿದ್ದೇನೆ, ಎಂದು ತಿಳಿಸಬೇಕಾಗಿದೆ. ಸಾಮಾನ್ಯವಾಗಿ ಒಬ್ಬ ಶಾಸಕ ಬಂದು ರಾಜೀನಾಮೆ ಕೊಟ್ಟಾಗ ಯಾವ ಕಾರಣವನ್ನೂ ಹೇಳುವ ಹಾಗಿಲ್ಲ. ಆ ಪ್ರಿಸ್‌ಕ್ರೈಬ್ ಫಾರಂನಲ್ಲಿ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿದ್ದೇನೆಂದು ಹೇಳಿ ಡೇಟ್, ಸಹಿ ಅಷ್ಟು ಹಾಕಿ ಕೊಟ್ಟರೆ, ತಮಗೊಂದು ಜವಾಬ್ದಾರಿ ಇರುತ್ತೆ. ಅವರನ್ನು ಕರೆಸಿ, ಕೂರಿಸಿ, ನಿಮಗೆ ಇಷ್ಟವಾದರೆ ಅವರಿಗೆ ಒಂದು ಕಪ್ ಟೀ ಕೊಟ್ಟು ಏನಪ್ಪಾ ಬಹಳ ಭಾವೋದ್ವೇಗಕ್ಕೆ ಒಳಗಾಗಿದ್ದೀಯಾ, ಏನಸ್ಸಿಗೆ ಏನಾದರೂ ಬೇಸರವಾಗಿದೆಯೇ ದಯಮಾಡಿ ಸ್ವಲ್ಪ ಸುಧಾರಿಸಿಕೋ ಅಂತ ಹೇಳಿ ಒಂದು ಅವಕಾಶವನ್ನು ಅವರಿಗೆ ಕೊಟ್ಟು ನಿಮಗೆ ಕನ್‌ವಿನ್ಸ್ ಆದ ಮೇಲೆ ಅವರು ಮನಸ್ಸು ಪೂರ್ವಕವಾಗಿ ರಾಜೀನಾಮೆ ಕೊಡುತ್ತಿದ್ದಾರೆ ಅಂತ ಹೇಳಿ ತಮಗೆ ಅನಿಸಿದಾಗ ತಾವು ಅವರು ಆಯಿತಪ್ಪ, ತಮಗೆ ಒಳ್ಳೆಯದಾಗಲಿ ಅಂತ ಹೇಳಿ ಅವರ ರಾಜೀನಾಮೆಯನ್ನು ತಾವು ಸ್ವೀಕಾರ ಮಾಡಿ ತಮ್ಮ ಒಪ್ಪಿಗೆಯನ್ನು ಕೊಡುತ್ತೀರಿ. ಇದು ನಮ್ಮ ಪದ್ಧತಿ, ಇದು ರೂಲ್ಸ್, ವ್ಯವಸ್ಥೆ ಎಲ್ಲಾ ಇರತಕ್ಕಂಥಾದ್ದು. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜಕೀಯ ವಾತಾವರಣದಲ್ಲಿ ಸೈದ್ಧಾಂತಿಕ ಕಾರಣಗಳಿಗಾಗಿ,

ತಾವು ಆರಿಸಿ ಬಂದಂತಹ ಪಕ್ಷದಿಂದ ದೂರ ಸರಿದು ತನ್ನದೇ ಆದಂತಹ ಒಂದು ದಾರಿಯನ್ನು ಹುಡುಕಿಕೊಳ್ಳುವುದಕ್ಕೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ನಾನು ನನ್ನ ನಿಲುವನ್ನು ನಮ್ಮ ಜನರಿಗೆ ತಿಳಿಸಬೇಕಾಗಿದೆ. ಅದಕ್ಕೆ ಇದಕ್ಕಿಂತ ಉತ್ತಮವಾದ ವೇದಿಕೆ ಇನ್ನೊಂದಿಲ್ಲ. ನಾನು ಯಾವ ರೀತಿಯಲ್ಲೂ ಈ ಸದನವನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲ ಅಂತ ಹೇಳಿರುವಾಗ ತಾವು ಒಂದು ಅವಕಾಶವನ್ನು ಕೊಡಬೇಕಾಗುತ್ತದೆಯೋ ಏನೋ ಅಂತ ನನಗನ್ನಿಸುತ್ತದೆ. ದಯಮಾಡಿ ತಾವು ಯೋಚನೆ ಮಾಡಿ. ಇದರಲ್ಲಿ ನಾವು ಕಳೆದುಕೊಳ್ಳುವುದು ಏನೂ ಇಲ್ಲ. ಹೊಸ ಸಂಪ್ರದಾಯವನ್ನು ನಾವು ಹಾಕುವುದೂ ಏನೂ ಇಲ್ಲ.

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೇ, ನಿಯಮ 202ರಲ್ಲಿ ಏನಾಗಿದೆ ಅಂದರೆ ಅವರು ಆ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು, ಆ ಪತ್ರದಲ್ಲಿ ಅವರು ಯಾವುದೇ ಕಾರಣವನ್ನು ನಮೂದಿಸುವ ಹಾಗೆ ಇಲ್ಲ. ಒಂದು ವೇಳೆ ಅವರು ನಮೂದಿಸಿದ್ದರೂ ಸಹ ಸ್ಪೀಕರ್‌ರವರು ಅದನ್ನು ಹೊಡೆದು ಹಾಕಬಹುದು. ಸದನಕ್ಕೆ ಅವರ ರಾಜೀನಾಮೆ ವಿಚಾರವನ್ನು ತಿಳಿಸುವಾಗ ಅವರು ಇಲ್ಲಿ ಏನು ನಮೂದಿಸಿರುತ್ತಾರೆ ಅದನ್ನು ಯಾವುದನ್ನೂ ಸಹ ಹೇಳಬಾರದು ಎನ್ನತಕ್ಕಂಥ ರೀತಿಯಲ್ಲಿ ಕ್ಲಿಯರ್ ಆಗಿ ಇದೆ. ನಾನು ಹೇಳುವುದೇನೆಂದರೆ the intention of the framers of that rules ಏನಿರಬಹುದು. ಆದ್ದರಿಂದ, ಯಾವುದೇ ರೀತಿ ಹೇಳದೆ ರಾಜೀನಾಮೆ ಕೊಟ್ಟಿದ್ದೇನೆ. ಅಷ್ಟು ಬಿಟ್ಟರೆ ಬೇರೆ ಯಾವುದೂ ಸದನದಲ್ಲಿ ಹೇಳಬಾರದು ಎನ್ನತಕ್ಕಂಥಾದ್ದು the intention of that rule. ರೂಲ್ಸ್ ಫ್ರೇಮ್ ಮಾಡಬೇಕಾಗಿದ್ದರೆ ಅದೇ ಇನ್‌ಟೆನ್‌ಷನ್. ಅದಕ್ಕೆ ಕಾಂಟ್ರರಿಯಾಗಿ....

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, the intention of the framers of the rules, ಈ ರೂಲ್ಸ್ ಮಾಡುವಾಗ ಹಾಗಿದ್ದಿದ್ದರೆ ಲಿಖಿತ ಹೇಳಿಕೆ ಕೊಡಲೇ ಕೂಡದು ಅಂತ ಹೇಳಿಬಿಡುತ್ತಿದ್ದರು ಬಹಳ ಸ್ಪಷ್ಟವಾಗಿ, if that was the intention. ನಿಯಮ 202ರಲ್ಲಿ ಹೇಳುವಾಗ ಅವರು ಯಾವುದೇ ಹೇಳಿಕೆ ಕೊಡಕೂಡದು ಅಂತ. ಆಮೇಲೆ 202ರಲ್ಲಿ ಏನು ಹೇಳುತ್ತಾರೆ. ಬರವಣಿಗೆಯಲ್ಲಿ ಒಂದು ರಾಜೀನಾಮೆ ಪತ್ರವನ್ನು ಕೊಡಬೇಕು. ಅದು ಕೊಟ್ಟು ಕಾರಣಗಳನ್ನು ಅಲ್ಲಿ ನಮೂದಿಸಬಾರದು ಅಂತ ಹೇಳುತ್ತಾರೆ. That I am going to follow that rule. ಅದನ್ನು ಮಾಡುತ್ತೇನೆ. ನಾನು ರಾಜೀನಾಮೆಯನ್ನು ಸಬ್‌ಮಿಟ್ ಮಾಡುವಾಗ ನಾನು ಅದನ್ನೇ ಮಾಡುವುದು. ನಿಮಗೆ ನಾನು ಹೊಡೆದು ಹಾಕುವುದಕ್ಕೂ ಅವಕಾಶ ಕೊಡುವುದಿಲ್ಲ. ಅದು ಮಾಡೋಣ.

ಅಧ್ಯಕ್ಷರು : ಅಲ್ಲಿ ಏನು ಹೇಳಿದ್ದಾರೆ. ಯಾವುದೇ ಕಾರಣಗಳು ಹೇಳಬಾರದು.

SRI SIDDARAMAIAH : I am going to follow hundred percent strictly Rule No. 202, ಹಾಗೇ ಕೊಡುತ್ತೇನೆ. ಫಾರ್ಮೇಟ್‌ನಲ್ಲಿ ಏನಿದೆಯೋ ಅದನ್ನೇ

ಕೊಡುತ್ತೇನೆ. ನಿಮಗೆ ತೊಂದರೆ ಆಗಬಾರದು. ಎರಡನೆಯದು, ಈ ಸದನದಲ್ಲಿ ಈಗಾಗಲೇ ಒಂದು ಪ್ರಿಸಿಡೆಂಟ್ ಆಗಿದೆ. ಆಗ ಅವರು the intention of the framers of rules ಅದಕ್ಕೆ ಕಾಂಟ್ರರಿಯಾಗಿ ಕೊಟ್ಟುಬಿಟ್ಟಿದ್ದೀರಾ? Can anybody presume like that? I want to know. ಅವತ್ತು ರೂಲ್ಸ್ ಫ್ರೇಮ್ ಮಾಡುವಾಗ ಈ ತರಹ, ನನ್ನ ಪ್ರಕಾರ ರಾಜೀನಾಮೆ ಕೊಡುವುದು ಬಹಳ ಅಪರೂಪದ ಪ್ರಸಂಗಗಳು. ಸದನಕ್ಕೆ ರಾಜೀನಾಮೆ ಮಧ್ಯೆದಲ್ಲಿಯೇ ಕೊಡುವಂತಾದ್ದು ಬಹಳ ಅಪರೂಪದ ಪ್ರಸಂಗಗಳು. ಇಂತಹ ಪ್ರಸಂಗಗಳು ಆಗಿಂದಾಗ್ಗೆ ಬರುತ್ತವೆ ಅಂತ ಹೇಳಿ ಬಹುಶಃ ಈ ರೂಲ್‌ನ್ನು ಫ್ರೇಮ್ ಮಾಡಿದವರಿಗೆ ಗೊತ್ತಿದ್ದರೆ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. ಅದಕ್ಕೋಸ್ಕರವೇ ರೂಲ್ 202ರಲ್ಲಿ ಆ ತರಹದ ಸ್ಪಷ್ಟತೆ ಇಲ್ಲದೇ ಇದ್ದರೂ ಕೂಡ ರೂಲ್ 332ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. It is an independent rule. ಅದಕ್ಕೆ ಏನಾದರೂ ಇನ್ನೊಂದು ರೂಲ್ ಅವಲಂಬನೆಯಾಗಿದೆಯೇ ಅಥವಾ ಅದಕ್ಕೆ ಏನಾದರೂ ಪ್ರಾವಿಜೋ ಇದೆಯೇ? It is not a provision at all. Such being the case....

ಅಧ್ಯಕ್ಷರು : ಯಾವ ಸಂದರ್ಭದಲ್ಲಿ ಅದನ್ನು.....

SRI SIDDARAMAIAH : I don't see any valid ground to refuse to make a statement. This, I think, is going to be unconstitutional. It is going to be undemocratic. It is not correct.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರೇ, ಹಿಂದೆ ಕೂಡ ಈ ವಿಚಾರದಲ್ಲಿ ಬಹಳ ಪ್ರಶ್ನೋತ್ತರಗಳಾದವು. ಈ ವಿಚಾರದಲ್ಲಿ ಈಗಾಗಲೇ ತಾವೂ ಕೂಡ ತೀರ್ಮಾನ ತೆಗೆದುಕೊಂಡಿದ್ದೀರಿ. ತೀರ್ಮಾನವನ್ನು ಪುನರ್ವಿಮರ್ಶೆ ಮಾಡಿ ಅಂತ ಕೇಳಿಕೊಳ್ಳುವ ಹಕ್ಕು ಎಲ್ಲಾ ಸದಸ್ಯರಿಗೂ ಇರುತ್ತದೆ. ಆದರೆ ಇಲ್ಲಿ ಆತರಹ ಪುನರ್ವಿಮರ್ಶೆ ಮಾಡಲು ಕಾನೂನಿನಲ್ಲಿ ಅಥವಾ ನಮ್ಮ ಶಕ್ತರ್ ಮತ್ತು ಕೌಲ್‌ನಲ್ಲಿ ವಿವರಿಸಿರುವ ಕಾರಣಗಳೂ ಕೂಡ ಇವೆ. ಅವುಗಳಲ್ಲಿ ಇತ್ತೀಚಿನ ಉದಾಹರಣೆ ಅಂದರೆ ಮಾನ್ಯ ಬಂಗಾರಪ್ಪನವರು ರಾಜೀನಾಮೆ ಕೊಟ್ಟರು. ಅವರೂ ತನ್ನದೇ ಆದ ಸೈದ್ಧಾಂತಿಕ ಕಾರಣಕ್ಕಾಗಿ ಪಕ್ಷವನ್ನು ಬಿಟ್ಟು ಮತ್ತೊಂದು ಪಕ್ಷದ ಜತೆ ಸೇರಿಕೊಳ್ಳಬೇಕಾದ ಕಾಲದಲ್ಲಿ ಸತ್ಸಂಪ್ರದಾಯ ಸೃಷ್ಟಿಯಾಗಬೇಕು ಎಂದು ಲೋಕಸಭಾ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟರು. ಅದನ್ನು ಚೇಂಬರ್‌ನಲ್ಲೇ ಮಾನ್ಯ ಸ್ಪೀಕರ್ ಸ್ವೀಕರಿಸಿ ಅವರಿಗೆ ಸದನದಲ್ಲಿ ಮಾತನಾಡಲು ಯಾವುದೇ ಅವಕಾಶ ಕೊಡಲಿಲ್ಲ. ಹಾಗೆಯೇ ಶ್ರೀಮತಿ ಸೋನಿಯಾಗಾಂಧಿಯವರು ಇತ್ತೀಚೆಗೆ ಲಾಭದಾಯಕ ಹುದ್ದೆ ವಿಚಾರದಲ್ಲಿ.

ಶ್ರೀ ಸಿದ್ದರಾಮಯ್ಯ : ಅವರು ಅನುಮತಿ ಕೇಳಿರಲಿಲ್ಲ. It is not relavent at all.

ಶ್ರೀ ಎಂ. ಪಿ. ಪ್ರಕಾಶ್ : ನಾನು ಯಾಕೆ ಹೇಳ್ತೇನೆ ಅಂದರೆ ಅವರಿಗೆ ಅದು ಗೊತ್ತಿತ್ತು ನಿಯಮ ಅದಕ್ಕೆ ಅವಕಾಶ ಕಲ್ಪಿಸಿಕೊಡುವುದಿಲ್ಲ ಅಂತ. ಲಾಭದಾಯಕ ಹುದ್ದೆ ವಿಚಾರದಲ್ಲಿ ಶ್ರೀಮತಿ ಸೋನಿಯಾಗಾಂಧಿಯವರೂ ರಾಜೀನಾಮೆ ಕೊಟ್ಟರು. ಅವರ ಬಗ್ಗೆಯೂ ರಾಷ್ಟ್ರಪತಿಗಳಿಗೆ ಒಂದು ಮನವಿ ಕೊಟ್ಟಿದ್ದಾರೆ ಅಂತ ಗೊತ್ತಾದ ತಕ್ಷಣವೇ ಅವರು ರಾಜೀನಾಮೆ ಕೊಟ್ಟರು. ಸದನದಲ್ಲಿ ಯಾವ ಕಾರಣಕ್ಕಾಗಿ ತಾನು ಕೊಡುತ್ತಿದ್ದೇನೆ ಅಂತ ಅವರು ಪ್ರಸ್ತಾಪಿಸಲಿಲ್ಲ. ಸ್ಪೀಕರ್‌ರವರೇ ಅದನ್ನು ತಳ್ಳಿಹಾಕಿದರು. ಅವರು ಕೇಳಲಿಲ್ಲ ಅದಕ್ಕಾಗಿ ಕೊಡಲಿಲ್ಲ ಎಂಬುದು ಬೇರೆ ವಿಷಯ. ಅವರು ಯಾಕೆ ಕೇಳಲಿಲ್ಲ ಅಂದರೆ ನಿಯಮ ಅದಕ್ಕೆ ಅವಕಾಶ ಕೊಡುವುದಿಲ್ಲ ಅಂತ ಗೊತ್ತಿತ್ತು, ನೋಡಿ ಅಕಾಡೆಮಿಕಾಗಿ ಚರ್ಚೆ ಮಾಡೋಣ, ನಾವೆಲ್ಲರೂ ಬೃಹಸ್ಪತಿಗಳು, ನಿಯಮ ನಾವು ಹೇಳಿದ್ದೇ ಸರಿ ಅನ್ನುವುದು ಬೇಡ. ಎಲ್ಲರೂ ಕೂಡ ತಿದ್ದಿಕೊಳ್ಳಬೇಕಾಗುತ್ತದೆ. ಸಂಪ್ರದಾಯ ಇದೆ, ಇಲ್ಲ ಅಂತ ಹೇಳುವುದಿಲ್ಲ, ಸಂಪ್ರದಾಯಗಳೂ ಕೂಡ ಬದಲಿಸಿರತಕ್ಕದ್ದು ಇದೆ ಸಂಪ್ರದಾಯಗಳನ್ನು ಸೃಷ್ಟಿ ಮಾಡಿರುವುದೂ ಇದೆ. ಸಂಪ್ರದಾಯಗಳು ಯಾವುದೇ ಶೂನ್ಯದಿಂದ ಬರುವುದಿಲ್ಲ. ನಾವೇ ಸಂಪ್ರದಾಯ ಹುಟ್ಟಿಹಾಕಬಹುದು ಹಾಕಿದ ಸಂಪ್ರದಾಯವನ್ನು ತೆಗೆದೂ ಹಾಕಬಹುದು. ಅದಕ್ಕಾಗಿಯೇ ಕನ್ನಡದಲ್ಲಿ ಒಂದು ಗಾದೆಮಾತಿದೆ : "ತಾತ ಹಾಕಿದ ಆಲದಮರಕ್ಕೆ ನಾವು ನೇಣು ಹಾಕ್ಕೋಬೇಕು" ಅಂತ ಏನಿಲ್ಲ ಅಂತ, ಅಥವಾ ಬೆಕ್ಕಿನ ಪೂಜೆಯ ಕತೆ ಅನ್ನುವುದನ್ನು ನಾವು ಕೇಳಿದ್ದೇವೆ. ಆದ್ದರಿಂದ ಸಂಪ್ರದಾಯ ಅನ್ನುವುದಕ್ಕಿಂತ ಹೆಚ್ಚಾಗಿ ಈ ಸಂದರ್ಭದಲ್ಲಿ ನೀವೇನು ತೀರ್ಮಾನ ಕೊಟ್ಟಿದ್ದೀರಿ, ಅದನ್ನು ಬದಲಿಸಬೇಕಾದ ಅವಕಾಶ ಇಲ್ಲ. ಮತ್ತೆ ಈ Anti Defection Bill ವಿಚಾರದಲ್ಲಿ ಮಾನ್ಯ ರಮೇಶಕುಮಾರ್ ಹೇಳುವಾಗ ತರುಮಲ ನಾಗಿರೆಡ್ಡಿಯವರ ಬಗ್ಗೆ ಹೇಳಿದರು. ಅವರೊಬ್ಬ ದೊಡ್ಡ ಉದಾತ್ತವಾದಂಥ ವ್ಯಕ್ತಿಯಾಗಿದ್ದರು. ನಮಗೆ ವೈಯಕ್ತಿಕವಾಗಿ ಬಹಳ ದೊಡ್ಡ ಸಂಬಂಧಗಳೂ ಇತ್ತು. ಲೋಕಸಭಾ ಸದಸ್ಯರಾಗಿದ್ದರು. ಜೈಲಿನಲ್ಲೇ ಇದ್ದು ಅವರ ತಂಗಿಯ ಗಂಡ ಮಾನ್ಯ ನೀಲಂ ಸಂಜೀವರೆಡ್ಡಿಯವರನ್ನು ಅವರು ಸೋಲಿಸಿದ್ದರು. ಅವರು ಬದುಕಿರುವವರೆಗೂ ಅವರು ಅನಂತಪುರಕ್ಕೆ ಬಂದು ನಿಲ್ಲುತ್ತಿರಲಿಲ್ಲ. ಕಾಳಹಸ್ತಿಗೆ ಹೋಗಿ ಸಂಜೀವರೆಡ್ಡಿಯವರು ಗೆದ್ದು ಬರುತ್ತಿದ್ದರು. ಆ ತರಹದ ಹೋರಾಟಗಾರರಾಗಿದ್ದವರ ಸಾವು ಕಡೆಗೆ ಹೇಗಾಯಿತು ಹೈದರಾಬಾದಿನಲ್ಲಿ ಅಂದರೆ ಅವರ ತಂಗಿ ಮನೆ ಮುಂದೆ ಆತನ ಹೆಣ ಇಡಬೇಕಾಯಿತು. ಆತನ ಮೇಲೆ ಎಲ್ಲಾ ತರಹದ ವಾರಂಟ್‌ಗಳಿದ್ದವು. ಅವರನ್ನು ಮುಂದೆ ತರುಮಲಕ್ಕೆ ತಂದರು, ಅವರು ದೊಡ್ಡ ಜಮೀನ್ದಾರರಾಗಿದ್ದರು. ಆ ಸಂದರ್ಭದಲ್ಲಿ ಸಂಪ್ರದಾಯಗಳು ಸೃಷ್ಟಿಯಾಗಿರಲಿಲ್ಲ. ಅದೇ ಆ ತರಹದ್ದು ಪ್ರಥಮ ಎಂಬ ಕಾರಣವೂ ಇತ್ತು. ಆ ಕಾರಣಕ್ಕಾಗಿ ಅವತ್ತು ಅವರಿಗೆ ಮಾತನಾಡಲು ಅವಕಾಶ ಕೊಟ್ಟರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಸ್ಟೇಟ್‌ಮೆಂಟ್ ಮಾಡಿ ಬಹಳ ದಿವಸದ ನಂತರ ಎಮರ್ಜೆನ್ಸಿ ವೇಳೆ ಅವರು ಸತ್ತಿದ್ದು.

ಶ್ರೀ ಎಂ.ಪಿ. ಪ್ರಕಾಶ್ : ಅದನ್ನೇ ನಾನು ಹೇಳುತ್ತಿರುವುದು. 1960ರಿಂದ ಅವರು ನನ್ನ ರೂಮಿನಲ್ಲೇ ಬಂದು ಉಳಿಯುತ್ತಿದ್ದರು. ವೈಯಕ್ತಿಕವಾಗಿ ತರುಮಲ ರಾಮದಾಸ ರೆಡ್ಡಿ ಅವರ ಸಹೋದರ ನನ್ನ ರೂಂಮೇಟು ಮತ್ತು ಹಾಸ್ಟೆಲ್‌ಮೇಟೂ ಕೂಡ. ಆದ್ದರಿಂದ ವೈಯಕ್ತಿಕವಾಗಿ ಅವರನ್ನು ಪೂರ್ಣ ಬಲ್ಲ ವ್ಯಕ್ತಿ ಅವರ ಶವಸಂಸ್ಕಾರಕ್ಕೂ ನಾವೆಲ್ಲಾ ಹೋಗಿದ್ದೆವು. ಹೋಗಿದ್ದೆವು ಅನ್ನುವುದು ದೊಡ್ಡ ವಿಚಾರವಲ್ಲ, ನಾವೆಲ್ಲಾ ಹೇಡಿಗಳಾದ್ವಿ. ಅವರ ಶಕ್ತಿ ನಮಗಿರತಕ್ಕದ್ದೇನಲ್ಲ. ಆದರೆ ಅವತ್ತಿನ ಕಾಲಕ್ಕೆ ನಕ್ಸಲ್ ಬಾರಿ ಹೋರಾಟ ಮಾಡುವ ಮುಂಚೆಯೇ ಅವರು ಯೋಚನೆ ಮಾಡಿದರು. ಸೀತಾರಾಮಯ್ಯ ಪಿಡಬ್ಲ್ಯುಜಿ ಮಾಡುವ ಮುಂಚೆಯೇ ನಾಗರೆಡ್ಡಿಯವರು ಶಸ್ತ್ರಾಸ್ತ್ರಕ್ಕೆ ಮಾರು ಹೋದರು. ಅವರು ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಅಲ್ಲ. ಅವತ್ತಿದ್ದದ್ದೇ ಕಮ್ಯುನಿಸ್ಟ್ ಪಾರ್ಟಿ ಮಾತ್ರ. ಅದೇನೇ ಇರಲಿ, ಆ ಸಂದರ್ಭದಲ್ಲಿ ಈ ಸಂಪ್ರದಾಯ ಸೃಷ್ಟಿಯಾಗಿರಲಿಲ್ಲ. ನಂತರದಲ್ಲಿ ಈ ಸಂಪ್ರದಾಯಗಳು ಸೃಷ್ಟಿಯಾಗಿ ಶಕ್ಧರ್ ಮತ್ತು ಕೌಲ್ ಹೇಳುತ್ತಾರೆ. ಸದಸ್ಯರಾಗಿರುವವರು ವೈಯಕ್ತಿಕ ವಿವರಣೆ ಕೊಡಬೇಕಾದ್ದು ಇಲ್ಲ ಎಂಬುದರ ಆಧಾರದ ಮೇಲೆ ನಾವು ಈ ನಿಯಮಾವಳಿಗಳನ್ನು ರಚನೆ ಮಾಡಿದ್ದೇವೆ. ಇವುಗಳನ್ನು ರಚನೆ ಮಾಡಿದ್ದು ಇತ್ತೀಚಿನ ದಿನಮಾನಗಳಲ್ಲಿ. ಅವುಗಳ ಪ್ರಕಾರವೇ ತಾವೂ ಪೀಠಾಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಆ ಸಂದರ್ಭದ ಬಗ್ಗೆ ಹೇಳುವುದಾದರೆ ನಿಯಮಾವಳಿಗಳಿಗೆ ಅದನ್ನು ತರಬಹುದಾಗಿತ್ತು. ಈಗಲೂ ನಾವೆಲ್ಲರೂ ಕಲೆತು ನಿಯಮಾವಳಿ ಬದಲಾಯಿಸಬಹುದಾಗಿದೆ. ಆ ರೀತಿ ಮಾಡಿದರೆ ಸರಿಹೋಗುತ್ತಿದೆಯೇ ವಿನಾ ನಿಯಮ 202ರಲ್ಲಿ ಸ್ಪಷ್ಟವಾಗಿ ಇದಕ್ಕೆ ಅವಕಾಶ ಕಲ್ಪಿಸಿಕೊಡಬಾರದು ಅಂತ ಇರುವುದರಿಂದ ಪುನರ್ವಿಮರ್ಶೆ ಮಾಡುವ ಅವಕಾಶ ಇಲ್ಲ ಅಂತ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಧ್ಯಕ್ಷರೇ, ತಮ್ಮ ಸ್ಥಾನ ಇದೆಯಲ್ಲಾ ಬಹಳ ಮುಜುಗರಕ್ಕೆ ಒಳಗಾಗತಕ್ಕ ಸ್ಥಾನ. ಸನ್ಮಾನ್ಯ ಪ್ರಕಾಶರು ಮಂತ್ರಿಯಾಗಿದ್ದರು. ಗೆಳೆಯರಾದ ಬಿ. ಸೋಮಶೇಖರ್ ಮಂತ್ರಿಯಾಗಿದ್ದರು. ಅವರು ಯಾವುದೋ ಒಂದು ಕಾರಣದಿಂದ ರಾಜೀನಾಮೆ ಕೊಟ್ಟರು. ನಮ್ಮ ರೂಲ್ಸ್ ಏನು ಹೇಳುತ್ತದೆ ಅಂದರೆ ರಾಜೀನಾಮೆ ಕೊಟ್ಟ ಸಚಿವರು ಮಾಡುವ ಹೇಳಿಕೆಯನ್ನು ಒಂದು ಕಾಪಿಯನ್ನು ನಮಗೆ ಕಳಿಸಬೇಕು. ಲೀಡರ್‌ಗೂ ಹೋಗಬೇಕಾಗುತ್ತದೆ. ಅವರಿಬ್ಬರೂ ಅಪ್ರೂ ಮಾಡಿದ ಮೇಲೆ ಆ ಸ್ಟೇಟ್‌ಮೆಂಟ್ ಓದಬೇಕು. ಸೋಮಶೇಖರ್ ಸದನದಲ್ಲಿ ಎದ್ದು ಏಕಾಏಕಿ ಹೇಳಿಕೆ ನೀಡಲು ಶುರು ಮಾಡಿದರು. ಜೆಎಚ್ ಪಾಟೇಲರು ಕೂತಿದ್ದರು. ಪ್ರಕಾಶರು ಅದೇ ಮಂತ್ರಿಮಂಡಲದ ಸದಸ್ಯರಿದ್ದರು. ಇವರ್ಯಾರೂ ಸೋಮಶೇಖರರನ್ನು ತಡೆಯುವ ಸ್ಥಿತಿಯಲ್ಲಿರಲಿಲ್ಲ. ಅವರ ಹೇಳಿಕೆ ಸರ್ಟಿಫೈ ಆಗಿರಲಿಲ್ಲ. It was not scrutinised, either by me, the then Speaker or by the Leader of the House. ಸಾಮಾಜಿಕವಾಗಿ ಅದು ಎಂತಹ ಕ್ರೂಷಿಯಲ್ ಇಷ್ಯೂ ಅಂದರೆ ಏನು

ಮಾತನಾಡಿದರೂ ಒಂದು ರೀತಿಯ ಅಪಾಯ ಮೈಮೇಲೆ ಬರುವ ಸನ್ನಿವೇಶ. ಹಾಗಾಗಿ ಅವತ್ತು ಯಾವ ರೂಲ್ಸೂ ಕೆಲಸ ಮಾಡಲಿಲ್ಲ. ಎಲ್ಲಾ ಅವರವರಷ್ಟಕ್ಕೆ ಕೈ ಕಟ್ಟಿಕೊಂಡು ಅಸಹಾಯಕವಾಗಿ ಕೂತು we allowed him to make the statement. ಬೇಕಾದರೆ ಆ ಹೇಳಿಕೆಯನ್ನು ಇವತ್ತು ನೀವು ತರಿಸಿ ನೋಡಿ. ಯಾವ ಇಂಟೆನ್‌ಶನ್ಸ್ ಅನ್ನು ತಾವು ಹೇಳಿದಿರಿ ಅದಕ್ಕೆ ವಿರುದ್ಧವಾದದ್ದೇ ಅಲ್ಲಿ ನಡೆದಿರುವುದು. ಇಂಟೆನ್‌ಶನ್ಸ್ ಬೇರೆ, ಇಂಪ್ಲೈಡ್ ಮೀನಿಂಗ್ ಬೇರೆ.

ಶ್ರೀ ಎಂ.ಪಿ. ಪ್ರಕಾಶ್ : ಅಸಹಾಯಕತೆಯಿಂದ ಸ್ಪೀಕರ್ ಅದಕ್ಕೆ ಅವಕಾಶ ಕಲ್ಪಿಸಿಕೊಟ್ಟರು ಬೇರೆಯವರು ಅದರಲ್ಲಿ ಭಾಗವಹಿಸಲಿಲ್ಲ ಅಂದರೆ ಅದನ್ನೇ ನಾವು ಸಂಪ್ರದಾಯ ಅಂತ ಭಾವಿಸಬೇಕೇ?

SRI K.R. RAMESHKUMAR : You did not listen to me. Please listen to me. ನಾನು ಹೇಳುವುದು ಇಂತಹ ಸನ್ನಿವೇಶಗಳು ನಮಗೂ ಎದುರಾಗಿವೆ. ಇಂಟೆನ್‌ಶನ್ಸ್ ಬೇರೆ ಇಂಪ್ಲೈಡ್ ಮೀನಿಂಗ್ ಬೇರೆ. ಏನು ಬರವಣಿಗೆಯಲ್ಲಿ ತಮ್ಮ ರಾಜೀನಾಮೆ ಕೊಡುತ್ತಾರೆ ಅದರಲ್ಲಿ ಕಾರಣಗಳನ್ನು ಯಾಕೆ ಸೂಚಿಸಬಾರದು ಅಂದರೆ ಮತ್ತೆ ಅದೊಂದು ವಿವಾದದ ವಿಷಯವಾಗಬಾರದು ಎಂಬುದು ಇಂಪ್ಲೈಡ್ ಮೀನಿಂಗ್. ಇಂಟೆನ್‌ಶನ್ ಏನು ಅಂದರೆ ಯಾವ ಪಕ್ಷದಿಂದ ಅವರು ಆರಿಸಿಬಂದರು ಆ ಪಕ್ಷದಿಂದ ಅವರು ಸಂಬಂಧ ಕಡಿದುಕೊಳ್ಳುತ್ತಿದ್ದಾರೆ. ಅದು ಸರೀನೋ ತಪ್ಪೋ, ಅದು ಜನರಿಗೆ ಬಿಟ್ಟ ವಿಚಾರ. ಅವರು ತಮ್ಮ ಕ್ಷೇತ್ರದ ವ್ಯಾಪ್ತಿಗೂ ಮೀರಿ ಸಾರ್ವಜನಿಕ ಜೀವನದಲ್ಲಿ ಅವರದೇ ಆದಂಥ ಒಂದು ಸ್ಥಾನವನ್ನು ಕರ್ನಾಟಕ ರಾಜಕಾರಣದಲ್ಲಿ ಗಳಿಸಿಕೊಂಡಿದ್ದಾರೆ. ಹಿಂದೆ 77ನೇ ಇಸವಿಯಲ್ಲಿ ಅಧ್ಯಕ್ಷರು ಇಂಥದ್ದೇ ಸಂದರ್ಭದಲ್ಲಿ ಜಯರಾಂರವರು ತಾವು ಆರಿಸಿಬಂದ ಪಕ್ಷವನ್ನು ಬಿಟ್ಟು ಹೋಗಬೇಕು ಎಂಬ ನಿರ್ಣಯ ಮಾಡಿದಾಗ ಅವಕಾಶವನ್ನು ಕೊಟ್ಟಿದ್ದಾರೆ. 77 ರಿಂದೇಚೆಗೆ ನಮ್ಮ ನಿಯಮಾವಳಿಗಳು ಬದಲಾವಣೆಯಾಗಿ ಆ ಒಂದು ಘಟನೆಯನ್ನು ಮನಸಿನಲ್ಲಿಟ್ಟುಕೊಂಡು ಇನ್ನು ಮುಂದಕ್ಕೆ ಇದನ್ನು ನಿಷಿದ್ಧ ಮಾಡಬೇಕು ಅಂತ ಏನೂ ಆಗಿಲ್ಲ. ಅವರು ಇವತ್ತು ಕೇಳುತ್ತಿರುವುದು ಕೂಡ ತಮ್ಮ ನಿಲುವನ್ನು ಪ್ರಕಟಪಡಿಸಲಿಕ್ಕೆ ಇದೊಂದು ಯೋಗ್ಯ ವೇದಿಕೆ, ನನಗೆ ಅವಕಾಶ ಸಿಕ್ಕಿದೆ, ನಾನು ಹೇಳಬೇಕು ಎಂಬುದೇ ಹೊರತು ಮತ್ತೇನನ್ನೂ ಕೇಳುತ್ತಿಲ್ಲ. ಸಂವಿಧಾನಕ್ಕೆ ಅಪಚಾರ ಮಾಡುವುದಾಗಲಿ ಕೌಲ್ ಅಂಡ್ ಶಕ್ದರ್‌ಗೆ ಅಪಚಾರ ಮಾಡುವುದಾಗಲಿ ಅಥವಾ ಯಾರಿಗೋ ನೋವುಂಟು ಮಾಡುವುದಾಗಲಿ ಅಂಥ ಯಾವ ಇನ್‌ಕ್ರಿಮೆನೇಶನ್ ಇರುವುದಿಲ್ಲ. Only he wants to make his intentions clear. ತಾವು ದೊಡ್ಡ ಮನಸ್ಸು ಮಾಡಿ circumstances ಅನ್ನು understand ಮಾಡಿಕೊಳ್ಳಿ. ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡ ಆ ಒಂದು ಘಟನೆ ಏನು ನಡೆದಿದೆ ಅದನ್ನು ಆಧಾರವಾಗಿಟ್ಟುಕೊಂಡು, ಶ್ರೀಮಾನ್ ಸಿದ್ದರಾಮಯ್ಯನವರಿಗೆ ಅವರು ಯಾಕೆ ಈ ಸಭೆಯಿಂದ ನಿರ್ಗಮಿಸಬೇಕು ಅಂತ ತೀರ್ಮಾನ ಮಾಡಿದ್ದಾರೆ ಎಂಬ ವಿಚಾರವನ್ನು ಜನರಿಗೆ ತಿಳಿಸಲಿಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಅದು ನಿಜಕ್ಕೂ ಒಳ್ಳೆಯದಾಗುತ್ತದೆ ಎಂಬುದು ನನ್ನ ಮನವರಿಕೆ ಸ್ವಾಮಿ.

ಅಧ್ಯಕ್ಷರು : ರಮೇಶ್‌ಕುಮಾರ್‌ರವರೇ, ನಾನು ಅಬ್ಸರ್ವ್ ಮಾಡಿದಂತೆ 293ನೇ ನಿಯಮ ಇತ್ತೀಚೆಗೆ ರಚನೆಯಾದ ನಿಯಮಾವಳಿಗಳು. ಇದು ಹಳೆಯದು. ಹಳೆಯದನ್ನು ಆಧರಿಸಿ ಅವರು ಕೊಟ್ಟಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನೀಲಂ ಸಂಜೀವರೆಡ್ಡಿಯವರಿಗೆ ಅವರ 5 ವರ್ಷದ ಸಭಾಧ್ಯಕ್ಷಗಿರಿಯಾದ ಮೇಲೆ ಪತ್ರಿಕೆಯವರು ಕೇಳುತ್ತಾರೆ. ಹೇಗೆ ನೀವು ಇಷ್ಟೊಂದು successful ಸಭಾಧ್ಯಕ್ಷರಾದಿರಿ ಅಂದದ್ದಕ್ಕೆ ನಾನು ರೂಲ್ಸ್ ಬುಕ್ ಓದಲಿಲ್ಲ ಅಂದರು. I never read the ruels ಎಂದು ಹೇಳುತ್ತಾರೆ. ಅದಕ್ಕಿಂತ ಹೆಚ್ಚು ನಾನು ಏನೂ ಹೇಳಲಾರೆ ಸ್ವಾಮಿ.

ಅಧ್ಯಕ್ಷರು : ಇನ್ನೊಂದು, ಇಲ್ಲಿ ಏನು ಕೊಟ್ಟಿದ್ದಾರೆ ಅಂದರೆ ಆಗಿನ ರೂಲಿಂಗ್ ಪಾರ್ಟಿಯನ್ನು ಅಕ್ಯೂಸ್ ಮಾಡಿದ್ದಾರೆ. ಓದಿದೆ. ಇದು ನನಗೆ ಗೊತ್ತಿರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಆ ರೂಲ್ಸ್‌ನ್ನು ನೋಡದಂಥ ಕಾರಣಕ್ಕಾಗಿಯೇ ಅವರು ತಮ್ಮ ಹಳೆಯ ವೈರತ್ವವನ್ನು ಜಗಜೀವನರಾಂ ಅವರ ಮೇಲೆ ಹೇಗೆ ಸಾಧಿಸಿದರು ಎಂಬುದು ನಿಮಗೆ ಗೊತ್ತಿದೆ. ಇತಿಹಾಸದಲ್ಲಿ ಜಗಜೀವನರಾಂ ಅವರಿಗೆ ಒಂದು ಅವಕಾಶವನ್ನು ಕೊಡದೆ ಬಹುಮತವನ್ನು ತೋರಿಸುತ್ತೇವೆಂದಾಗಲೂ ಕೂಡ.....

SRI K.R. RAMESHKUMAR : Man is the most deceitful creature never created on the earth. Man is the most deceitful creature. ನಮ್ಮೆಲ್ಲರಿಗೂ ಕೂಡ ನಮ್ಮ ಬಹಿರಂಗ ಸ್ವರೂಪವೇ ಬೇರೆ ಇದೆ. ನಮ್ಮ ಅಂತರಂಗ ಆಲೋಚನೆಗಳೇ ಬೇರೆ ಇದೆ. ನಾವೆಲ್ಲರೂ ಕೂಡ ಈ ಹಿಪೊಕ್ರಸಿಗೆ ಒಳಗಾಗಿರತಕ್ಕವರು. None of us are an exception to this.

ಶ್ರೀ ಎಂ.ಪಿ. ಪ್ರಕಾಶ್ : ಇದರ ಆಶಯ ಇಷ್ಟೇ. ಯಾರು ವಿಚಾರಗಳನ್ನು ಮಾಡುವಂಥ ಸಂದರ್ಭಗಳಲ್ಲಿ appearance is a deceiption, ಎಂದು ಗಾದೆ ಮಾತಿದೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ಸೆಕ್ಷನ್ 202ರಲ್ಲಿ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ವೈಯಕ್ತಿಕ ಕಾರಣಗಳನ್ನು ಕೊಡಲೇಕೂಡದು. ರಾಜೀನಾಮೆಯನ್ನು ಕೊಡಬೇಕಾದರೆ ಎಂದು ಇದ್ದ ಮೇಲೆ ಇನ್ನು ಈ ಸದನದಲ್ಲಿ ವೈಯಕ್ತಿಕ ಕಾರಣಗಳನ್ನು ಹೇಳಿಕೊಳ್ಳಬೇಕೆಂದು ಹೇಳಿ ಯಾವ ಕಾನೂನು ಹೇಳುತ್ತೆ? ವೈಯಕ್ತಿಕ, ಸಾಮಾಜಿಕ ಎಲ್ಲಾ ಒಂದೇ. ಹೊರಗಡೆ ಹೇಳಿಕೊಳ್ಳುವುದಕ್ಕೆ ಅವರಿಗೆ ವೇದಿಕೆಗಳಿವೆ. ಸಾರ್ವಜನಿಕರಿಗೆ ಹೇಳುವುದಕ್ಕೆ ಮಾಧ್ಯಮಗಳ ಮೂಲಕ ಹೇಳಬಹುದು. ಸಾರ್ವಜನಿಕ ಸಭೆಗಳ ಮೂಲಕ ಹೇಳಬಹುದು. ಇವತ್ತು ಅವರು ರಾಜೀನಾಮೆಯನ್ನು ಕೊಟ್ಟಿರತಕ್ಕದ್ದಕ್ಕೆ ನಾವ್ಯಾರೂ ಸಹಾ ಒಪ್ಪುತ್ತೇವೆ ಎಂದಲ್ಲ. ರಾಜೀನಾಮೆ ಕೊಡುವುದು ಬೇಡ ಎಂದು ನಾವು ಬೇಕಾದರೆ ವೈಯಕ್ತಿಕವಾಗಿ ಅವರಿಗೆ ಹೇಳುತ್ತೇವೆ. ಆದರೆ

ಅವರು ರಾಜೀನಾಮೆ ಕೊಟ್ಟಂಥದ್ದನ್ನು ಈ ಸದನದಲ್ಲಿ ರೂಲ್ಸ್‌ನ್ನು ಬಿಟ್ಟು ತಾವೇನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ಅದು ಸೂಕ್ಷ್ಮ ಸತ್ಯ ಇದೆ. 202ರಲ್ಲಿ ಅವರು ಕಾರಣಗಳನ್ನು ಕೊಡಬಾರದು ಎಂದು ಇದ್ದ ಮೇಲೆ ಇನ್ನು ಕಾರಣಗಳನ್ನು ಇಲ್ಲಿ ಹೇಳುವುದು ಸೂಕ್ತವಲ್ಲ. ದಯಮಾಡಿ ಮಾನ್ಯ ಅಧ್ಯಕ್ಷರು ಹೇಳಿರುವುದು ಸೂಕ್ತ ಇದೆ. ಮುಂದೆ ಸಭೆಯನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಪದೇ ಪದೇ ಎಷ್ಟು ಹೇಳಿದರೂ ಅಷ್ಟೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಚಲುವರಾಯಸ್ವಾಮಿಯವರು ಹೇಳಿದರು. ಎಂ.ಆರ್. ಜಯರಾಂ ಅವರು ರಾಜೀನಾಮೆಯನ್ನು ಕೊಡಲಿಕ್ಕೆ ಯಾವ ರೂಲ್ ಇತ್ತು. ಇದೇ ತರಹದ ರೂಲ್ ಅವತ್ತೂ ಇತ್ತು. ಅವತ್ತೇನೂ ಬೇರೆ ತರಹದ ರೂಲ್ ಇರಲಿಲ್ಲ. ಅವತ್ತೂ ಕೂಡ ರಾಜೀನಾಮೆ ಪತ್ರದಲ್ಲಿ ಕಾರಣಗಳನ್ನು ಕೊಡಬೇಕೆಂದು ಇರಲಿಲ್ಲ. ಅವತ್ತೂ ಕೂಡ ಕಾರಣಗಳನ್ನು ನಮೂದು ಮಾಡಬಾರದು ಎಂದು ಅವತ್ತೂ ಇದ್ದದ್ದು. ಅಂಥ ಪರಿಸ್ಥಿತಿಯಲ್ಲಿ ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದ್ದರಿಂದ ಇವರು ಹೇಳುವ ಆರ್ಗ್ಯುಮೆಂಟ್‌ಗೆ ಎಂ.ಪಿ. ಪ್ರಕಾಶ್‌ರವರು ಸಂಪ್ರದಾಯ ಇದ್ದರೆ ಬದಲಾಯಿಸಬಾರದೇ, ಅಂದರೆ ಮೊನ್ನೆ ಆರ್ಗ್ಯುಮೆಂಟ್ ಏನಿತ್ತು? ಸಂಪ್ರದಾಯವೇ ಇಲ್ಲ. We cannot create new precedent. ಈ ಸದನದಲ್ಲಿ ಯಾವುದಾದರೂ ಕೂಡ ಸಮಾಜದ ಮೇಲೆ ದುಷ್ಪರಿಣಾಮವಾಗುತ್ತಿದ್ದರೆ, ಜನರ ಬದುಕಿನ ಮೇಲೆ ದುಷ್ಪರಿಣಾಮವಾಗುತ್ತಿದ್ದರೆ ಇಲ್ಲಿ ನಡವಳಿಕೆಗಳಿಗೆ ಒಂದು ಕೆಟ್ಟ ಸಂಪ್ರದಾಯವಾಗುವುದಾದರೆ ಮುಂದೆ ಸದನ ನಡೆಸುವುದಕ್ಕೆ ದೊಡ್ಡ ತೊಂದರೆಗಳಾಗುವುದಾದರೆ I can understand ನಾನು ಇವರು ಹೇಳುವ ಆರ್ಗ್ಯುಮೆಂಟ್‌ಗೆ ಒಪ್ಪಿಕೊಳ್ಳುತ್ತೇನೆ. ಇದ್ಯಾವುದಕ್ಕೂ ಧಕ್ಕೆ ಆಗುವುದಿಲ್ಲ. ನಾನು ಯಾರನ್ನೂ ಕೂಡ ಕುರಿತು ಆರೋಪವನ್ನೂ ಮಾಡುವುದಕ್ಕೂ ಹೋಗುವುದಿಲ್ಲ. ಏಕೆಂದರೆ 332ರಲ್ಲಿ ಡಿಬೇಟಬಲ್ ಸ್ಟೇಟ್‌ಮೆಂಟನ್ನು ಮಾಡಬಾರದೆಂದು ಇದೆ. ಆ ಕಾರಣದಿಂದ ಡಿಬೇಟ್ ಮಾಡುವುದಕ್ಕೆ ಆಗದೇ ಇರುವ ಸ್ಟೇಟ್‌ಮೆಂಟನ್ನು ಮಾಡುವುದು. ಈ ಎಲ್ಲಾ ಹಿನ್ನೆಲೆಯಲ್ಲಿ I don't see, ಇದು ವ್ಯಾಲಿಡ್ ರೀಸನ್ ಇದೆ. ನನಗೆ ತಿರಸ್ಕಾರ ಮಾಡುವುದಕ್ಕೆ ಎಂದು ನಾನು ಅಂದುಕೊಂಡಿಲ್ಲ. ನಾನಂತೂ I am very very clear. ಇದು ನನಗೆ ಕೊಡದೇ ಹೋದರೆ ನನಗನ್ನಿಸುತ್ತದೆ. ಇದು ನ್ಯಾಚುರಲ್ ಜಸ್ಟೀಸ್ ಇದೆಯಲ್ಲಾ, ಅದಕ್ಕೆ ವಿರೋಧವಾಗುತ್ತದೆ. ಡೆಮಾಕ್ರಸಿಗೇ ವಿರೋಧವಾಗುತ್ತದೆ. ಸಂವಿಧಾನಕ್ಕೆ ಅಪಚಾರವಾಗುತ್ತದೆ. I am making it very very clear. How can you curtail my right? It is my right. In democracy, how can you prevent me from making a statement? ನನಗೆ ಅರ್ಥವಾಗುವುದಿಲ್ಲ. ಮಾಡಬಾರದು ಅಂತ ಈ ದೇಶಕ್ಕೆ ಇದು ಅನಾಹುತವಾಗುತ್ತದೆ ಎಂದು ಈ ರೀತಿ ಹೇಳುವುದು

ಇದೆಯಲ್ಲಾ, please review your decision. Please allow me to make a personal explanation.

ಶ್ರೀ ಅಂಜನಮೂರ್ತಿ : ಅವರಿಗೆ ಅವಕಾಶವನ್ನು ಕೊಟ್ಟರೆ ಸುನಾಮಿ ಅಲೆ ಬಂದು ಬಿಡುತ್ತಾ? ಸುಮ್ಮನೆ ಏಕೆ ಇಷ್ಟೊಂದು ಒದ್ದಾಡುತ್ತೀರಿ?

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ಸಿದ್ದರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ರಾಜೀನಾಮೆ ಪತ್ರವನ್ನು ಕೊಡತಕ್ಕ ಕಾಲದಲ್ಲಿ ನನಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿದ್ದಾರೆ. ನಾನು ಮೊನ್ನೆ ಕೂಡ ನಾವು ಮತ್ತು ಖರ್ಗೆಯವರು, ಮಾನ್ಯ ದೇಶಪಾಂಡೆಯವರು ಎಲ್ಲರೂ ಕೂಡ ನಮ್ಮ ಪಕ್ಷದ ಪರವಾಗಿ ಹೇಳಿದ್ದೇವೆ. ಅವರು ರಾಜ್ಯದ ಒಬ್ಬ ಹಿರಿಯ ಸದಸ್ಯರಾಗಿದ್ದಾರೆ. ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ವಿಶೇಷವಾಗಿ ಹಣಕಾಸಿನ ಕ್ಷೇತ್ರದಲ್ಲಿ ಏನು ಎರಡು ಬಜೆಟ್‌ಗಳನ್ನು ಮಂಡನೆ ಮಾಡಿದ್ದಾರೆ. ಎಲ್ಲಾ ಕಡೆಗೂ ಜನರನ್ನು ಮೆಚ್ಚುಗೆ ವ್ಯಕ್ತಪಡಿಸುವ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಇರತಕ್ಕ ಈ ಸಮ್ಮಿಶ್ರ ಸರ್ಕಾರದ ಪರಿಸ್ಥಿತಿ ಏನಿದೆ, ಈ ಹಿನ್ನೆಲೆಯಲ್ಲಿ ಅವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತಿದ್ದಾರೆ. ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಇತರ ಸದಸ್ಯರೂ ಕೂಡ ಹೇಳಿದ್ದಾರೆ. ಮಾನ್ಯ ಸಿದ್ದರಾಮಯ್ಯನವರೂ ಕೂಡ ಸ್ವತಃ ಹೇಳಿದ್ದಾರೆ. ಇಂಥ ಒಂದು ಪ್ರಸಂಗ ಬಂದಾಗ 1977ರಲ್ಲಿ ತಮ್ಮ ಸ್ಥಾನದಲ್ಲಿ ಕುಳಿತಿದ್ದ ಶ್ರೀಮತಿ ನಾಗರತ್ನಮ್ಮನವರು ಈ ಒಂದು ಅಪ್ಪಣೆಯನ್ನು ಕೊಟ್ಟಿದ್ದಾರೆ. ಸ್ಟೇಟ್‌ಮೆಂಟನ್ನೂ ಕೂಡ ಮಾಡಿದ್ದಾರೆ. ಅವರಿಗಿಂತಲೂ ಕೂಡ ತಾವೇನೂ ಇವತ್ತು ಸದನದಲ್ಲಿ ಕೆ.ವಿ. ಶಂಕರೇಗೌಡರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ನೀವು ಸದನದಲ್ಲಿ ಹೇಳಿಕೆ ಕೊಟ್ಟಂಥ ಏನು ಘಟನೆಗಳನ್ನು ಬಿಟ್ಟು ಅಲ್ಲಿ ಚಿಂತಾಮೋಹನ್ ಬಗ್ಗೆ ಲೋಕಸಭೆಗೆ ಹೋಗುತ್ತಿದ್ದೀರಿ. ಅದೂ ಅಲ್ಲ. ಈ ಸದನದಲ್ಲಿ ಈ ತರಹದ ಅವಕಾಶ ಇದೆ.

ಅಧ್ಯಕ್ಷರು : ಎಲ್ಲದಕ್ಕೂ ಲೋಕಸಭೆ ನಮ್ಮ ಈ ರಾಜ್ಯದ ದೇಶದ.....

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸಿದ್ದರಾಮಯ್ಯನವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಯಾರ ಬಗ್ಗೆಯೂ ಕೂಡ ಟೀಕೆ ಟಿಪ್ಪಣಿ ಮಾಡಲು ನಿಂತಿಲ್ಲ. ಸರ್ಕಾರದ ಮೇಲೆ ನಾನು ಏನೂ ಹೇಳಲು ತಯಾರಿಲ್ಲ. ಇವತ್ತು ರಾಜಕೀಯ ಪರಿಸ್ಥಿತಿಯಲ್ಲಿ ಏಕೆ ನಾನು ರಾಜೀನಾಮೆಯನ್ನು ಕೊಡುತ್ತಿದ್ದೇನೆ ಎಂದರೆ ಕೇವಲ ಅವರ ಕ್ಷೇತ್ರದ್ದು ಅಲ್ಲ. ಇವತ್ತು ಇಡೀ ರಾಜ್ಯಕ್ಕೆ ಇವತ್ತಿನ ಪರಿಸ್ಥಿತಿಯಲ್ಲಿ ಏನು ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ಜನ ಅಭಿಪ್ರಾಯ ಅವರ ಪರವಾಗಿ ಏನು ಇದೆ, ಎಲ್ಲಾ ಸದನದ ಸದಸ್ಯರೂ ಕೂಡ ಕೆಲವು ಆ ಕಡೆ ಕುಳಿತವರಿಗೂ ಕೂಡ ಒಪ್ಪಿಗೆ ಇರಲಿಕ್ಕೂ ಇಲ್ಲ. ಆದರೂ ಕೂಡ ಸಿದ್ದರಾಮಯ್ಯನವರೇನು ಹೇಳಬೇಕಾಗಿದೆ ಎನ್ನುವ ರೀತಿಯಲ್ಲಿ ಇಡೀ ರಾಜ್ಯವೇ

ನಿರೀಕ್ಷೆ ಮಾಡುತ್ತಿದೆ. ಅದಕ್ಕೆ ತಾವು ಇಂಥ ಒಂದು ಸಮಯದಲ್ಲಿ ಅವರಿಗೆ ಅವಕಾಶವನ್ನು ಕೊಡಲಾರದೆ ಹೋದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ.

ಅಧ್ಯಕ್ಷರು : ನಿಯಮಾವಳಿಗಳನ್ನು ಹೇಳಿ ಸ್ವಾಮಿ.

ಶ್ರೀ ಎನ್. ಧರ್ಮಸಿಂಗ್ : ಅದಕ್ಕೆ ತಾವು ಅದನ್ನು ಬದಿಗಿಟ್ಟು ಇವತ್ತು ತಾವು ಮಾಡಬೇಕಾಗಿದೆ. ನಾವು ಹೋದಸಲ ಸಿದ್ದರಾಮಯ್ಯನವರಿಗೆ ಅವಕಾಶ ಕಲ್ಪಿಸಿಕೊಡಲಿಲ್ಲವೆಂದು ಹೇಳಿ ನಾವೆಲ್ಲರೂ ಕೂಡ ಧರಣಿ ಕೂಡಿದ್ದೆವು ವೆಲ್‌ನಲ್ಲಿ. ತಾವು ಮತ್ತೆ ಅಡ್ಜರ್ನ್ ಮಾಡಿದಿರಿ. Again, ಮೂರೂವರೆ ಗಂಟೆಗೆ ಕೂತಿದ್ದೆವು. ಮತ್ತೆ ಇವತ್ತು ಮಾಡಿದ್ದೀರಿ. ಇವತ್ತು ಒಂದು ವೇಳೆ ಅದೇ ತಮ್ಮ ನಿಲುವು, ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಹೇಳಿಕೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದರೆ ನಮ್ಮ ಪ್ರತಿಭಟನೆಯನ್ನು ಮುಂದುವರೆಸಿಕೊಂಡು ಹೋಗುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು : ಪ್ರತಿಭಟನೆ ವಿಚಾರ ಬೇರೆ.

(ಅಡಚಣೆ)

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಎರಡು ನಿಮಿಷ ಮಾತನಾಡಬೇಕು.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ ಮತ್ತು ಸಿದ್ದರಾಮಯ್ಯನವರೂ ಕೂಡ ಪದೇ ಪದೇ .....

(ಅಡಚಣೆ)

ಅಧ್ಯಕ್ಷರು : ನೋಡಿ ಈಗಲೇ ಪ್ರಾರಂಭವಾಯಿತು. ಇನ್ನು ಅವರಿಗೆ ಅವಕಾಶ ಕೊಟ್ಟರೆ ಇನ್ನೇನಾಗಬಹುದು ಹೇಳಿ.

(ಅಡಚಣೆ)

ಶ್ರೀ ಬಸವರಾಜ ರಾಯರೆಡ್ಡಿ : ರೇಣುಕಾಚಾರ್ಯ ಅವರು ಮೊನ್ನೆ ಇದೇ ರೀತಿ ಜಗಳವನ್ನು ಮಾಡಿದರು. xx

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, xx

(ಅಡಚಣೆ)

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ರೀ ಸ್ವಾಮಿ, ಬೇರೆ ಬೇರೆ ಪದಗಳನ್ನು ನಾವು ಬಳಸಬೇಕಾಗುತ್ತದೆ. ಬಹಳ ಗೌರವದಿಂದ ನಡೆದುಕೊಳ್ಳುತ್ತಿದ್ದೇವೆ. ನಾವು ಕೊಟ್ಟ ಗೌರವವನ್ನು ನೀವು ದಯವಿಟ್ಟು ತೆಗೆದುಕೊಳ್ಳಬೇಕು. ನಾವು ತುಂಬಾ ಗೌರವದಿಂದ ನಡೆದುಕೊಳ್ಳುತ್ತಿದ್ದೇವೆ. ನಮ್ಮ ಗೌರವವನ್ನು ದುರುಪಯೋಗ ಮಾಡಿಕೊಳ್ಳುವ ಪ್ರಯತ್ನವನ್ನು ದಯವಿಟ್ಟು ಮಾಡಬೇಡಿ. ನಾವಾದರೂ ಕೂಡ ಎಷ್ಟರಮಟ್ಟಿಗೆ ಹೇಳಬೇಕೋ ಅಷ್ಟರಮಟ್ಟಿಗೆ ಹೇಳುತ್ತಿದ್ದೇವೆ. ಏನೇನು ಹೇಳುತ್ತೀರೋ ಅಷ್ಟೇ ಸ್ಪೀಕರ್‌ಗೆ ಹೇಳಿ. ನಾವು ಬೇಡ ಎನ್ನುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : xx ಅದನ್ನು ತೆಗೆಸಿಹಾಕಬೇಕು.

(ಅಡಚಣೆ)

ಅಧ್ಯಕ್ಷರು : ಹ್ಯಾಬಿಚುಯಲ್ ಅಫೆಂಡರ್ ಎನ್ನುವುದನ್ನು ತೆಗೆಸುತ್ತೇನೆ ಬಿಡಿ. ಈ ತರಹ ಪದ ಉಪಯೋಗಿಸಬಾರದು. It should be removed.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಆ ಪದವನ್ನು ವಾಪಸ್ ತೆಗೆದುಕೊಳ್ಳಿ.

ಅಧ್ಯಕ್ಷರು : ಆ ಪದವನ್ನು ತೆಗೆದು ಹಾಕಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಆ ಪದವನ್ನು ಕ್ಷಮೆ ಕೇಳಿ ವಾಪಸ್ ತೆಗೆದುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ನೀವೇ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಆ ಪದ ವಾಪಸ್ ತೆಗೆದುಕೊಳ್ಳಲಿ ಅಧ್ಯಕ್ಷರೆ.

ಅಧ್ಯಕ್ಷರು : ಅದನ್ನು ತೆಗೆಸಿ ಹಾಕಿದ್ದೇನೆ. ಆ ಪದವನ್ನು ಏನು ಉಪಯೋಗಿಸಿದ್ದಾರೆ It should be removed. ಅದನ್ನು ತೆಗೆಸಿ ಹಾಕಲಾಗಿದೆ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇತ್ತೇಚೆಗೆ ಸದನ ಬಹಳ ಲವಲವಿಕೆಯಿಂದ ನಡೆಸುತ್ತಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ಆದರೆ ಈ ವಿಷಯದಲ್ಲಿ ಮಾತ್ರ ಸ್ವಲ್ಪ ಬಿಗಿ ಆಗಿದ್ದೀರಿ. ಅದಕ್ಕೆ ನನಗೆ ಗೊತ್ತಾಗುತ್ತಿಲ್ಲ. ಈ ವಿಷಯದಲ್ಲಿ ಮಾತ್ರ ಸ್ವಲ್ಪ ಬಿಗಿ ಆಗಿದ್ದೀರಿ. ಅದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು : ಅಲ್ಲ. ಆ ರೀತಿ ನೀವು ಹೇಳುವುದು ಸರಿಯಲ್ಲ. ನಿಯಮಾವಳಿಗಳನ್ನು ನಾನು ಹೇಳಿದ್ದೇನೆ.

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ ನಾನು ಹೇಳುತ್ತೇನೆ ಕೇಳಿ.

ಅಧ್ಯಕ್ಷರು : ಈಗ ಪಾರ್ಲಿಮೆಂಟಿನಲ್ಲಿ ರಾಜೀನಾಮೆ ಕೊಟ್ಟಾಗ ಅಲ್ಲಿನ ಸ್ಪೀಕರ್ ಏನು ಹೇಳಿದ್ದಾರೆ ಎಂದು ಹೇಳಿದ್ದೇನೆ. ಈವನ್ ರೆಸಿಡ್ಯುಯರಿ ಪವರ್ಸ್‌ನ್ನು ಯಾವ ಸಂದರ್ಭದಲ್ಲಿ ಎಂದು ಅದೆಲ್ಲಾ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಈ ಹಿಂದಿನ ಪ್ರಿಸಿಡೆಂಟ್ಸ್ ಕೂಡ ಇದೆ ಎನ್ನತಕ್ಕದ್ದು ಗೊತ್ತಿದೆ. ನಾನೂ ಇದೇ ಸದನದಲ್ಲಿ ಇದ್ದೆ. ಎಂ.ಎಸ್. ಜಯರಾಂ ಅವರು ಅಲ್ಲೇ ಕುಳಿತಿದ್ದರು. ಈಗೇನು ಮಾನ್ಯ ಸಿದ್ದರಾಮಯ್ಯನವರು ಕುಳಿತಿದ್ದಾರೆ, ಬಹುಶಃ ಆ ಹಿಂದಿನ ಸೀಟಿನಲ್ಲೇ ಕುಳಿತಿದ್ದರು. ಅವರು ಸ್ಟೇಟ್‌ಮೆಂಟ್ ಮಾಡಿದ್ದು ದಾಖಲೆಯಲ್ಲಿದೆ. ಬೇಕಾದರೆ ತಾವು ನೋಡಿ. ಸ್ವಲ್ಪ ಕೇಳಿ. ಒಂದು ಸಾರಿ ಪ್ರಿಸಿಡೆಂಟ್ ಇದ್ದು ಮೇಲೆ ನ್ಯಾಚುರಲಿ, ಪಾರ್ಲಿಮೆಂಟ್‌ನಲ್ಲಿ ಚಿಂತಾಮೋಹನ್ ಅವರು ಹೀಗೆ ಹೇಳಿದರು ಎಂದು ಹೇಳಿದಿರಿ. ಸಾರ್ ಊರ ಚಿಂತೆ ತೆಗೆದುಕೊಂಡು ಮುಲ್ಲಾ ಬಡವ ಆಗಿದ್ದನಂತೆ. ನೀವು ಇಲ್ಲೇನು ನಡೆದಿದೆ ಎಂದು ಅದನ್ನು ನೋಡಿ.

ಅಧ್ಯಕ್ಷರು : ನಾನು ಹೇಳುವುದು ಏನೆಂದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ಪ್ರಿಸಿಡೆಂಟ್ಸ್ ಇದೆ.....

ಅಧ್ಯಕ್ಷರು : ಒಟ್ಟಾರೆ ಹೇಳುವುದಾದರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋ, ನೋ. ಆ ಪ್ರಿಸಿಡೆಂಟ್ಸ್ ಇಲ್ಲದೇ ಇದ್ದಾಗ ಅದನ್ನು ನಾವು ರೆಫರ್ ಮಾಡುತ್ತೇವೆ. ಸಧ್ಯಕ್ಕೆ ನಮ್ಮಲ್ಲಿ ಆ ಪ್ರಿಸಿಡೆಂಟ್ಸ್ ಇದ್ದು, ಆ ಒಂದು ನಡವಳಿಕೆಯಲ್ಲಿ ತಾವು ಅನುಕೂಲ ಮಾಡಿ ಕೊಟ್ಟಾಗ ಪುನಃ ಪುನಃ ಅಲ್ಲಿನ ವಿಚಾರಗಳನ್ನು ಪ್ರಸ್ತಾಪ ಮಾಡಿ ರಿಜೆಕ್ಟ್ ಮಾಡತಕ್ಕದ್ದು ಚೆನ್ನಾಗಿರುವುದಿಲ್ಲ. ಇದು ಒಂದು. ಎರಡನೆಯದು ಏನಾಗುತ್ತಿದೆ? ಮಾನ್ಯ ಸಿದ್ದರಾಮಯ್ಯನವರು ಸ್ಟೇಟ್‌ಮೆಂಟ್ ಮಾಡಿ ಬಿಡುತ್ತಿದ್ದಾರೆ. ಅದರಲ್ಲಿ ಏನು ಇದೆ ಎನ್ನತಕ್ಕಂಥ ಕುತೂಹಲ ಇಡೀ ಕರ್ನಾಟಕ ಜನತೆಯಲ್ಲಿ ಇವತ್ತು ಮೂಡುತ್ತಿದೆ. ಏನು ಇದೆ? ಅಂತಹ ವಿಶೇಷ ಏನಾದರೂ ಇದೆಯಾ? ಏನಾದರೂ ಎಕ್ಸ್‌ಪ್ಲನೇಷನ್ ಮಾಡುತ್ತಾರಾ? ಅಥವಾ ಬಾಂಬ್ ಬ್ಲಾಸ್ಟ್ ಮಾಡುತ್ತಾರೇನೋ? ಅದಕ್ಕೆ ಸ್ಟೇಟ್‌ಮೆಂಟ್ ಮಾಡಲು ಅವಕಾಶ ಕೊಡುತ್ತಿಲ್ಲ ಎಂದು ಅನಾವಶ್ಯಕವಾಗಿ ಸಂಶಯವನ್ನು ನಾವೇ ಸೃಷ್ಟಿ ಮಾಡುತ್ತಿದ್ದೇವೆ. ಅದಕ್ಕೆ ದಯವಿಟ್ಟು ತಾವು ದೊಡ್ಡ ಮನಸ್ಸು ಮಾಡಿ. ಅಲೋ ಮಾಡಿ. ಇಲ್ಲಿಯವರೆಗೆ ಎರಡು ದಿವಸ ಅವರು ಸ್ಟೇಟ್‌ಮೆಂಟ್ ಮಾಡಬೇಕೆಂದು ಅವಕಾಶ ಕೊಡದೇ ಮುಂದೆ ಹೋಗಿದೆ. ಅವರು ಸ್ಟೇಟ್‌ಮೆಂಟ್ 10 ನಿಮಿಷ ಮಾಡಿ ಮುಗಿಸುತ್ತಾರೆ. ಅದಕ್ಕೆ ಅವಕಾಶ ಮಾಡಿ ಕೊಡಿ. ಅವರಿಗೆ ಅವಕಾಶ ಮಾಡಿ ಕೊಡಿ ಎಂದು ನಾವು ಧರಣಿ ಮಾಡುವುದು ಬೇಡ. ಹಿಂದೆ ಪ್ರಿಸಿಡೆಂಟ್ಸ್ ಇದೆ, ಆದ ಕಾರಣ ಅವರಿಗೆ ಅವಕಾಶ ಮಾಡಿಕೊಡಿ. ಇಲ್ಲಿನ ಬೇರೆ ಬೇರೆ ಉದಾಹರಣೆಗಳು ಏನು ಇದೆ? ಪ್ರಿಸಿಡೆಂಟ್ಸ್ ಏನು ಇದೆ, ಆ ಪ್ರಿಸಿಡೆಂಟ್ಸನ್ನು

ತೆಗೆದುಕೊಂಡು ದಯವಿಟ್ಟು ಅಲೋ ಮಾಡಿ. ಇದರಿಂದ ಏನೂ ತಾಪತ್ರಯ ಆಗುವುದಿಲ್ಲ. ಅರ್ತ್ ಕ್ವೇಕ್ ಆಗುವುದಿಲ್ಲ. ಸುನಾಮಿ ಬರುವುದಿಲ್ಲ ಅಥವಾ ಮತ್ತೇನಾದರೂ ಬಿರುಗಾಳಿ ಬರುತ್ತದೇನೋ ಜಪಾನ್ ಮೇಲೆ, ಚೈನಾ ಮೇಲೆ ಬಂದ ರೀತಿ, ಅಂಥಹದೇನೂ ಬರುವುದಿಲ್ಲ. ಏಕೆ ಸುಮ್ಮನೇ ಅನಾವಶ್ಯಕವಾಗಿ ಪ್ರಿಸ್ಟೀಜ್ ಇಶ್ಯೂ ಮಾಡಿಕೊಂಡು ಅವಕಾಶ ಕೊಡುವುದಿಲ್ಲವೆಂದು ತಳ್ಳಿ ಹಾಕುತ್ತಿದ್ದೀರಿ? ದಯವಿಟ್ಟು ಅಲೋ ಮಾಡಿ ಎಂದು ತಮ್ಮನ್ನು ಕಳಕಳಿಯಿಂದ ಕೈ ಜೋಡಿಸಿ ಕೇಳುತ್ತೇನೆ.

ಅಧ್ಯಕ್ಷರು : ಪ್ರಿಸ್ಟೀಜ್ ಇಶ್ಯೂ ಏನೂ ಇದಲ್ಲ.

ಶ್ರೀ ಬಿ.ಆರ್. ಪಾಟೀಲ್ (ಆಳಂದ) : ಸಾರ್, ಈಗ ಈ ಸದನದ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದೇವೆ. ನಾವೆಲ್ಲಾ 224 ಜನ ಸದಸ್ಯರೂ ನಿಮ್ಮ ಅಧೀನಕ್ಕೆ ಬರುತ್ತೇವೆ. ಜನ ನಮ್ಮನ್ನು ಕರ್ನಾಟಕ ವಿಧಾನಸಭೆ ಕಳುಹಿಸಿದ್ದಾರೆ. ಇವತ್ತು ನೀವು ಸಭಾಪತಿ ಜಾಗದಲ್ಲಿ ಕುಳಿತು, ಇವತ್ತು ಈ ಜವಾಬ್ದಾರಿಯನ್ನು ಹೊತ್ತಿದ್ದೀರಿ. ನಾವೆಲ್ಲಾ ಒಂದೊಂದು ಸಿದ್ಧಾಂತಗಳನ್ನು ಹೇಳಿಕೊಂಡು ಜನರ ಹತ್ತಿರ ಓಟು ತೆಗೆದುಕೊಂಡು ಬಂದಿದ್ದೇವೆ. ಈಗ ಕೆಲವು ರಾಜಕಾರಣದಲ್ಲಿ ವ್ಯತ್ಯಾಸಗಳು ಆದ ಮೇಲೆ ಕೆಲವು ಸಲ ಸಿದ್ಧಾಂತಗಳು ವಿರುದ್ಧವಾಗಿ ಹೋದಾಗ, ಕೆಲವು ಸಲ ನಮ್ಮ ಪರವಾಗಿ ಬಂದಾಗ, ನಮಗೆ ಬೇಸರ ಆದಾಗ, ನಾವು ಒಂದು ದಿಟ್ಟವಾದ ರಾಜಕೀಯ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ತಾವೇನೋ ಮೇಲಿಂದ ಮೇಲೆ ರೂಲ್ಸ್ ಬಗ್ಗೆ ಹೇಳಿದಿರಿ. ಅದನ್ನು ನಾವು ಒಪ್ಪುತ್ತೇವೆ. ರೂಲ್ಸನ್ನು ನಾವೇ ಮಾಡಿದ್ದು. ಬೇರೆ ಯಾರೂ ಮಾಡಿದ್ದಲ್ಲ. ನಾವೇ ರೂಲ್ಸನ್ನು ಮಾಡಿದ್ದು. ಈಗ ಮಾನ್ಯ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವುದು ಸದನ ನಡೆಯುತ್ತಿರತಕ್ಕಂಥ ಸಮಯದಲ್ಲಿ. ಚಾಮುಂಡೇಶ್ವರಿ ಜನ ಅವರನ್ನು ಆರಿಸಿ ಕಳಿಸಿದ್ದಾರೆ. ನಿಮ್ಮ ಕೊಠಡಿಯಲ್ಲಿ ಬಂದು ರಾಜೀನಾಮೆ ಕೊಟ್ಟು ಅದು ಅಂಗೀಕಾರ ಆಗಿ, ಅದೆಲ್ಲಾ ಫಾರ್ಮಾಲಿಟೀಸ್ ಆಗುತ್ತದೆ. ಆದರೆ ಸದನ ನಡೆಯುತ್ತಿರಬೇಕಾದರೆ ಅವರು ರಾಜೀನಾಮೆ ಕೊಟ್ಟಂತಹದ್ದು ಆ ಕ್ಷೇತ್ರದ ಜನತೆಗೆ ಗೊತ್ತಾಗಬೇಕು ಮತ್ತು ರಾಜ್ಯದ ಜನತೆಗೆ ಕೂಡ ಗೊತ್ತಾಗಬೇಕು. ಇದು ಅವರ ವೈಯಕ್ತಿಕವಾದಂತಹ ಹಕ್ಕು ಮತ್ತು ಅವರಿಗೆ ಬೇಕಾದುದ್ದೂ ಕೂಡ. ಆಮೇಲೆ ಇನ್ನೊಂದು ವಿಚಾರ. ಇವತ್ತು ಸದನದಲ್ಲಿ ಅನೇಕ ಒಳ್ಳೊಳ್ಳೆಯ ಸಂಸದೀಯ ಪಟುಗಳು ಇದ್ದಾರೆ. ಆ ಕಡೆನೂ ಇದ್ದಾರೆ, ಈ ಕಡೆನೂ ಇದ್ದಾರೆ. ಈ ಕಡೆ ಮಾನ್ಯ ಎಂ.ಪಿ. ಪ್ರಕಾಶ್ ಅವರು, ಮಾನ್ಯ ಖರ್ಗೆಯವರು, ಮಾನ್ಯ ಶ್ರೀರಾಮರೆಡ್ಡಿಯವರು, ಆಮೇಲೆ ಮಾನ್ಯ ನಮ್ಮ ಸಿದ್ದರಾಮಯ್ಯನವರು ಇದ್ದಾರೆ. ಇವರೆಲ್ಲರೂ ಕೂಡ ಸದನಕ್ಕೆ ಆಸ್ತಿ. ಯಾವುದೇ ಪಕ್ಷದವರು ಆಗಲಿ ಅವರು ಸದನಕ್ಕೆ ಆಸ್ತಿ ಇದ್ದ ಹಾಗೆ. ಇವತ್ತು ಮಾನ್ಯ ಸಿದ್ದರಾಮಯ್ಯನವರು ರಾಜೀನಾಮೆ ಕೊಟ್ಟು ಹೋಗುತ್ತಿರುವುದು ಇದು ನಮಗೆ ವೈಯಕ್ತಿಕವಾಗಿ ನೋವಾಗಿದ್ದರೂ ಕೂಡ ಇದು ಸದನಕ್ಕೆ ದೊಡ್ಡ ಹಾನಿ ಮತ್ತು ಈ

ರಾಜ್ಯದಲ್ಲಿ ತಮ್ಮದೇ ಆದಂತಹ ಕೆಲಸ ಕಾರ್ಯಗಳನ್ನು ಮಾಡಿ, ಈ ರಾಜ್ಯಕ್ಕೆ ದೊಡ್ಡ ಕೆಲಸವನ್ನು ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ಏಕೆ ರಾಜೀನಾಮೆ ಕೊಡುತ್ತಾರೆ ಎನ್ನುವುದು ಜನರಿಗೆ ಗೊತ್ತಾಗಬೇಕಾಗುತ್ತದೆ. ಅಧ್ಯಕ್ಷರೇ, ಇದು ನಮ್ಮ ವೈಯಕ್ತಿಕ ಜೀವನ ಅಲ್ಲ. ಸಾರ್ವಜನಿಕ ಜೀವನ. ಸಾರ್ವಜನಿಕ ಜೀವನದಲ್ಲಿ ಎಲ್ಲವೂ ಕೂಡ ಸ್ಪಷ್ಟವಾಗಿ ಮತ್ತು ನೇರವಾಗಿ ಬಹಿರಂಗವಾಗಿ ಜನತೆಗೆ ಗೊತ್ತಾಗಬೇಕು. ಮಾನ್ಯ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವಂತಹ ಸಂದರ್ಭದಲ್ಲಿ ಸದನ ನಡೆಯುತ್ತಿದೆ. ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ತಾವು ಅಧ್ಯಕ್ಷರು ಇದ್ದೀರಿ. ನಾವೆಲ್ಲಾ ನಿಮ್ಮ ವ್ಯಾಪ್ತಿಗೆ ಬರುತ್ತೇವೆ. ಹಾಗಾಗಿ ನೀವೇ ನಮಗೆ ಅವಕಾಶ ಮಾಡಿಕೊಟ್ಟು ರಾಜ್ಯದ ಜನತೆಗೆ ಇದರ ಸ್ಪಷ್ಟೀಕರಣ ಆಗುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಯಾವುದೂ ಕೂಡ ಗೊಂದಲ ಆಗುವುದಿಲ್ಲ. ದಯಮಾಡಿ ಇದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಜನತೆಗೆ ಗೊತ್ತಾಗಬೇಕು. ಏಕೆಂದರೆ ಮಾನ್ಯ ಸಿದ್ದರಾಮಯ್ಯನವರು ಒಬ್ಬ ಸಾಮಾನ್ಯ ವ್ಯಕ್ತಿ ಅಲ್ಲ. ಒಂದು ಸಿದ್ಧಾಂತವನ್ನು ಪ್ರತಿಪಾದನೆ ಮಾಡಿಕೊಂಡು ಮತ್ತು ಯಾವ ಒಂದು ಪಕ್ಷದ ಪ್ರಣಾಳಿಕೆ ಹೇಳಿ, ತಕ್ಷಣ ಸಿದ್ಧಾಂತ ಹೇಳಿ, ಮತವನ್ನು ಪಡೆದು ಈ ಸದನಕ್ಕೆ ಬಂದಿದ್ದಾರೆ, ಆ ಸಿದ್ಧಾಂತದ ಪರವಾಗಿ ಓಟು ಕೊಟ್ಟಂತಹ ಜನರಿಗೂ ಆ ಕ್ಷೇತ್ರದಲ್ಲಿ ಅಷ್ಟೇ ಅಲ್ಲ. ಇಡೀ ರಾಜ್ಯದಲ್ಲಿ ಕೂಡ ಆ ಪಕ್ಷದ ಸಿದ್ಧಾಂತದ ಜನರಿಗೂ ಕೂಡ ಗೊತ್ತಾಗಬೇಕು. ಏಕೆ ಸಿದ್ದರಾಮಯ್ಯನವರು ರಾಜೀನಾಮೆ ಕೊಡುತ್ತಾರೆ ಎಂದು ಅವರು ಈ ಕಾರಣಕ್ಕೆ ರಾಜೀನಾಮೆ ಕೊಟ್ಟರು ಎಂಬುದು ಗೊತ್ತಾಗಬೇಕು. ಹಾಗಾಗಿ ಒಂದು ಬಹಳ ತಾತ್ವಿಕ ಮತ್ತು ಸಿದ್ಧಾಂತದ ಪ್ರಶ್ನೆ ಆಗಿರುವುದರಿಂದ ದಯಮಾಡಿ ತಾವು ಅವರಿಗೆ ಅವಕಾಶ ಮಾಡಿ ಕೊಡಲೇಬೇಕು. ಅವರು ಹೇಳಿದ ಹಾಗೆ ವೈಯಕ್ತಿಕ ಹಕ್ಕುಗಳಿಗೆ ಚ್ಯುತಿ ತಂದ ಹಾಗೆ ಆಗುತ್ತದೆ. ತಾವು ದೊಡ್ಡ ಮನಸ್ಸು ಮಾಡಿ ಅವಕಾಶ ಮಾಡಿಕೊಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು. ಈಗ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ, ಯಾವುದೇ ಕಾನ್‌ಸ್ಟಿಟ್ಯೂಷನ್ ನೋಡಿದಾಗ, ಯಾವುದೇ ಒಂದು ದೇಶದ ವ್ಯವಸ್ಥೆ ನೋಡಬೇಕು. ನಾವಿ ಬ್ರಿಟಿಷ್ ಪಾರ್ಲಿಮೆಂಟ್ ನೋಡಿದರೆ ಅಲ್ಲಿ ರಿಟನ್ ಕಾನ್‌ಸ್ಟಿಟ್ಯೂಷನ್ ಇಲ್ಲ. ಯಾವ ರೀತಿಯಾಗಿ ಅಲ್ಲಿ ನಡೆಯುತ್ತಿದೆ ಎಂದರೆ ಒನ್ಲಿ ಆನ್ ಪ್ರಿಸಿಡೆಂಟ್ಸ್ ಮೇಲೆ ನಡೆಯುತ್ತಿದೆ. ಅಲ್ಲಿರತಕ್ಕಂಥ ಪ್ರಿಸಿಡೆಂಟ್ಸ್ ಮೇಲೆನೇ ಅಲ್ಲಿ ವ್ಯವಸ್ಥೆ ನಡೆಯುತ್ತಿದೆ. ಅದಕ್ಕೆ ಪ್ರಿಸಿಡೆಂಟ್ಸ್ ಎನ್ನತಕ್ಕದ್ದು ಬಹಳ ಪ್ರಮುಖವಾಗಿರತಕ್ಕದ್ದು. ಯಾವ ದೇಶದಲ್ಲಿ ಕಾನ್‌ಸ್ಟಿಟ್ಯೂಷನ್ ಇಲ್ಲ, ಅಲ್ಲಿ ಪ್ರಿಸಿಡೆಂಟ್ಸ್ ಮೇಲೆ ನಡೆಯುವಾಗ, ಇಲ್ಲಿ ಇರತಕ್ಕಂಥ ಪ್ರಿಸಿಡೆಂಟ್ಸನ್ನು ನಾವು ತಳ್ಳಿ ಹಾಕುವುದಕ್ಕೆ ಆಗುವುದಿಲ್ಲ. ಏಕೆಂದರೆ 332ರಲ್ಲಿ 'ಕೌಲ್ ಅಂಡ್ ಶಕ್ದರ್' ಒಪೀನಿಯನ್ ಏನೇ ಆಗಿರಬಹುದು. ಆದರೆ ಈ ಸದನದ

ಪ್ರಿಸಿಡೆಂಟ್ಸ್‌ಗಿಂತ ಅದು ದೊಡ್ಡದು ಎಂದು ನಾವು ಭಾವಿಸಬಾರದು. ಅದಕ್ಕಾಗಿ ಇವತ್ತು ಇಲ್ಲಿರತಕ್ಕಂಥ ಸಂಪ್ರದಾಯವನ್ನೇ ತಳ್ಳಿ ಹಾಕಿ ನಾವು ಕೌಲ್ ಅಂಡ್ ಶಕ್ದರ್‌ನಲ್ಲಿರತಕ್ಕ ಒಂದು ಓಪೀನಿಯನ್ ಮೇಲೆ ಅವಕಾಶ ಕೊಡುವುದಿಲ್ಲ ಎಂದರೆ ಇದು ಖಂಡಿತವಾಗಿ ಇದು ಪಾರ್ಲಿಮೆಂಟರಿ ಡೆಮಾಕ್ರಸಿ ವಿರುದ್ಧ ಆಗುತ್ತದೆ. ಏಕೆಂದರೆ ನಮ್ಮ ದೇಶದ ಒಂದು ಕಾನ್‌ಸ್ಟಿಟ್ಯೂಷನ್ ಇರಬಹುದು. ಆದರೆ ಇರತಕ್ಕಂಥ ರೂಲ್ ಬುಕ್ಕಿನಲ್ಲಿ ಎಲ್ಲೂ ಕೂಡ ಸ್ಟೇಟ್‌ಮೆಂಟ್ ಮಾಡಲಿಕ್ಕೆ ನಮಗೆ ಅವಕಾಶ ಇಲ್ಲ ಎಂದು ಹೇಳಿಲ್ಲ. ಒಂದು ವೇಳೆ ಈ ರೂಲ್ ಬುಕ್ಕಿನಲ್ಲಿ ಅವಕಾಶ ಇಲ್ಲ ಎಂದು ಹೇಳಿ ನಿರಾಕರಣೆ ಮಾಡಿದರೆ ಅದು ಬೇರೆ ವಿಷಯ. ಈ ರೂಲ್ ಬುಕ್ಕಿನಲ್ಲಿ ಎಲ್ಲೂ ಕೂಡ ಇವತ್ತು ಸ್ಟೇಟ್‌ಮೆಂಟ್ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ಹೇಳಿಲ್ಲ. ಆಮೇಲೆ ಈ ಸದನದಲ್ಲಿ ಪ್ರಿಸಿಡೆಂಟ್ಸ್ ಇದೆ. ಪ್ರಿಸಿಡೆಂಟ್ಸ್‌ಗೆ ಬಹಳ ಪ್ರಮುಖವಾಗಿರತಕ್ಕಂಥ ಮಹತ್ವ ಕೊಡಬೇಕಾಗುತ್ತದೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಅದನ್ನು ನಾವು ತಳ್ಳಿ ಹಾಕಿದರೆ ಖಂಡಿತವಾಗಿ ಇವತ್ತು ಪಾರ್ಲಿಮೆಂಟರಿ ಡೆಮಾಕ್ರಸಿ ವಿರುದ್ಧ ನಡೆದುಕೊಂಡ ಹಾಗೆ ಆಗುತ್ತದೆ. ಅದಕ್ಕಾಗಿ ತಮ್ಮ ಅಭಿಪ್ರಾಯ ಏನು ಇದೆ ಅದನ್ನು ಮರು ಪರಿಶೀಲನೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, ಪ್ರಿಸಿಡೆಂಟ್ಸ್ ಇದೆ. ಈ ಸದನದಲ್ಲಿ ಸತತ ಪ್ರಿಸಿಡೆಂಟ್ಸ್ ಆಗಿವೆ. ಈಗ ತಾವು ಅದನ್ನು ದಯಮಾಡಿ ಮುರಿಯಬೇಡಿ. ತಮ್ಮ ಕಾಲದಲ್ಲಿ ಒಳ್ಳೆಯ ಪ್ರಿಸಿಡೆಂಟ್ಸನ್ನು ಮುರಿದರು ಎಂಬ ಕೆಟ್ಟ ಹೆಸರು ಪಾರ್ಲಿಮೆಂಟರಿ ಇತಿಹಾಸದಲ್ಲಿ ತಾವು ತೆಗೆದುಕೊಳ್ಳ ಬೇಡಿರಿ. ಸ್ವಲ್ಪ ದಿವಸ ಇರುವುದು ಇದೆ. ಪರ್ಮನೆಂಟ್ ಯಾರೂ ಇರುವುದಿಲ್ಲ. ಆದ ಕಾರಣ ತಾವು ಕೆಟ್ಟ ಸಂಪ್ರದಾಯ ಹಾಕಬೇಡಿ. ಇದಕ್ಕೆ ತಾವು ಅಲೋ ಮಾಡಿ ಒಳ್ಳೆಯ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಮ್ಮಲ್ಲಿ ನನ್ನ ಕಳಕಳಿಯ ಬೇಡಿಕೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಈಗ ತಾವು ಈ ಸದನದ ಅಧ್ಯಕ್ಷರಾಗಿ ಕುಳಿತಿದ್ದೀರಿ. ಸಿದ್ದರಾಮಯ್ಯನವರು ತಮ್ಮ ಜೊತೆ ಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ. ಅವರು ಆಗ ಅಧ್ಯಕ್ಷರಾಗಿದ್ದರು, ತಾವು ಸದಸ್ಯರಾಗಿದ್ದೀರಿ. ನೀವೂ–ಅವರು ಒಂದೇ ಕಚೇರಿಯಲ್ಲಿ ವಕೀಲರಾಗಿ ಕೆಲಸ ಮಾಡಿದವರು. ನಿಮ್ಮ ಅವರ ಬಾಂಧವ್ಯ ಬಹಳ ಅಪಾರವಾದುದು. ಅದು ನಿಮಗೂ ಗೊತ್ತಿದೆ, ಅವರಿಗೂ ಗೊತ್ತಿದೆ. ಅದರ ಜೊತೆಗೆ ನಿಮ್ಮ ಜೆಡಿಎಲ್‌ಪಿ ಅಧ್ಯಕ್ಷರಾಗಿ ನಿಮ್ಮ ನಾಯಕರಾಗಿದ್ದವರು. ನಾವೆಲ್ಲರೂ ಇಲ್ಲಿ ಕುಳಿತಿದ್ದೆವು. ನಿಮ್ಮನ್ನು ಆ ಸ್ಥಾನಕ್ಕೆ ಕೂರಿಸಬೇಕಾದರೆ, ಬಹಳ ಹೋರಾಟ ಮಾಡಿದರೆಂದು ಮಾಧ್ಯಮದಲ್ಲೆಲ್ಲಾ ಬಂತು. ಹಾಗೂ ಚುನಾವಣೆಯಲ್ಲಿ ತಮಗೆ ಟಿಕೆಟ್ ಕೊಡಿಸುವುದಕ್ಕೂ ಬಹಳ ಹೋರಾಟ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂತು. ಏಕೆಂದರೆ, ನಾವೆಲ್ಲರೂ ಅಕ್ಕಪಕ್ಕದ ಜಿಲ್ಲೆಗಳವರಾಗಿದ್ದು, ನಿಮಗೂ–ಅವರಿಗೂ ಅಪಾರವಾದಂಥ

ವಿಶ್ವಾಸ ಇದೆ. ಇವೊತ್ತು ನಿಮ್ಮ ಸಂಬಂಧದ ಜೊತೆಗೆ, ನೀವು ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ನಿಮ್ಮ ಕೈಗೆ ಅವರು ರಾಜೀನಾಮೆ ಪತ್ರ ಕೊಡುವಂತಹ ಸಂದರ್ಭ, ಸನ್ನಿವೇಶ, ಪ್ರಸಂಗ ಆಗುತ್ತಿದೆಯಲ್ಲಾ ಇದು ಬಹಳ ವಿಭಿನ್ನವಾದ ಸಂದರ್ಭ, ಇಂತಹ ಸಂದರ್ಭದಲ್ಲಿ ಅದು ದುಃಖವೋ, ಸಂತೋಷವೋ, ತಮಗೂ ಈ ವಿಚಾರದಲ್ಲಿ ಹೃದಯ ಶ್ರೀಮಂತಿಕೆ ಇರಬೇಕು. ಇದಕ್ಕಾಗಿ ಮಾಧ್ಯಮದವರೆಲ್ಲರೂ ಕಾಯುತ್ತಿದ್ದಾರೆ. ನಾನು ಏಕೆ ರಾಜೀನಾಮೆ ಕೊಡುತ್ತಿದ್ದೇನೆ? ಈ ಗರ್ಭಗುಡಿಯಲ್ಲಿ ಏನಾದರೂ ಅಡಗಿದೆಯೇ? ಯಾವ ಗರ್ಭದಲ್ಲಿ ಏನಿದೆಯೆಂದು....

ಅಧ್ಯಕ್ಷರು : ಯಾವ ಗರ್ಭದಲ್ಲಿ ಏನೂ ಇಲ್ಲ. ನಿಯಮದಂತೆ....

ಶ್ರೀ ಡಿ.ಕೆ. ಶಿವಕುಮಾರ್ : ವಿಶೇಷವಾಗಿ, ಸಾಮಾಜಿಕವಾಗಿ ಒಂದು 'ಅಹಿಂದ' ಚಳವಳಿ ಪ್ರಾರಂಭ ಮಾಡಿದ್ದಾರೆ. ಹಿಂದುಳಿದವರ ನಾಯಕರಾಗಿ ಒಂದು ಚಳವಳಿ ಮಾಡಿದ್ದಕ್ಕೆ, ಈ ರಾಜ್ಯದ ಉಪ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡಂತಹ ಒಬ್ಬ ವ್ಯಕ್ತಿಗೆ ಇವೊತ್ತು ಮಾತನಾಡಲು ಒಂದು ಅವಕಾಶ ಕೊಡುವುದಿಲ್ಲವೆಂದರೆ, ತಮ್ಮ ಸ್ಥಾನಕ್ಕೆ ಚ್ಯುತಿ ಬಂದಂತಾಗುತ್ತದೆ. ಆದುದರಿಂದ, ತಾವು ದೊಡ್ಡ ಮನಸ್ಸು ಮಾಡಿ, ಹೃದಯ ಶ್ರೀಮಂತಿಕೆ ತೋರಿಸುವ ಮೂಲಕ ಅವರಿಗೆ ಮಾತನಾಡಲು ತಾವು ಒಂದು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಭಾರತ ಸಂವಿಧಾನಕ್ಕೆ ಸುಮಾರು 97ಕ್ಕೂ ಹೆಚ್ಚು ಬಾರಿ ತಿದ್ದುಪಡಿ ಮಾಡಿದ್ದಾರೆ. ಅದು ಅಷ್ಟೊಂದು flexible ಆಗಿದೆ. ಸರ್ಕಾರವೊಂದಕ್ಕೆ ಸಂವಿಧಾನವನ್ನು ಪರಾಮರ್ಶೆ ಮಾಡುವ ಅಧಿಕಾರ ಇಲ್ಲದಿದ್ದರೂ, ಪರಾಮರ್ಶೆ ಅಧಿಕಾರದ ಪ್ರಯತ್ನವನ್ನು ಸರ್ಕಾರಗಳು ಮಾಡಿವೆ. ಅಂತಹ ಸಂದರ್ಭದಲ್ಲಿ ಈ ಮನೆಯ ಸದಸ್ಯರಾಗಿ, ಸಾಮಾಜಿಕ ನ್ಯಾಯದಲ್ಲಿ ಬದ್ಧತೆಯಿಟ್ಟುಕೊಂಡು ರಾಜ್ಯಾಂಗದ ಸಂಗತಿಗಳನ್ನು ಜನಸಾಮಾನ್ಯರಿಗೆ ಹೇಳುವ ಒಂದು ವ್ಯಕ್ತಿತ್ವ ರೂಢಿಸಿಕೊಂಡಿರುವ ಒಬ್ಬ ಹಿರಿಯ ನಾಯಕರಾದ ಸಿದ್ದರಾಮಯ್ಯನವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತಿರುವ ಹಿನ್ನೆಲೆ ಹೇಳುವುದಕ್ಕೆ ಅವಕಾಶ ಕೊಡದಿರುವುದು ಸಂವಿಧಾನಬಾಹಿರ ಕ್ರಮವಾಗುತ್ತದೆ. ನೀವು ಅವರಿಗೆ ಅವಕಾಶ ಕೊಡಲೇಬೇಕಾಗುತ್ತದೆ. ಈ ಹಿಂದೆ ಈ ಮನೆಯಲ್ಲಿ ಅಂದಿನ ಸದಸ್ಯರಾಗಿದ್ದ ಜಯರಾಮ್‌ರವರು ಈ ಕುರಿತು ತಮ್ಮ ಹೇಳಿಕೆ ನೀಡಿರುವ ಉದಾಹರಣೆ ಇದೆ. ಇವೆಲ್ಲವನ್ನೂ ಇಟ್ಟುಕೊಂಡು ನೀವು The whole Constitution inclines towards Social Justice. ಅದನ್ನು ಪ್ರತಿಪಾದನೆ ಮಾಡತಕ್ಕಂಥ ಒಬ್ಬ ನಾಯಕರಿಗೆ ಅವರ ಅಭಿಪ್ರಾಯ ಮಂಡಿಸಲು ನಾನೇಕೆ ಈ ಮನೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂಬುದಕ್ಕೆ ತಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಕೊಡದೇ ಇರುವುದು ಆ ಸ್ಥಾನದಲ್ಲಿ ಕುಳಿತು ರಾಜ್ಯಾಂಗವನ್ನು ಎತ್ತಿಹಿಡಿಯುವ ತಮ್ಮ ಕರ್ತವ್ಯಕ್ಕೆ ಚ್ಯುತಿಯುಂಟಾಗಬಹುದು. ಆದುದರಿಂದ, ಅವರಿಗೆ ಅವಕಾಶ ಕೊಡಲೇಬೇಕೆಂದು ತಮ್ಮನ್ನು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) : ಮಾನ್ಯ ಅಧ್ಯಕ್ಷರೆ, ನಾವು ಈ ಸದನಕ್ಕೆ ಬರುವುದಕ್ಕೆ ಮುಂಚಿತವಾಗಿ ಏನು ತಿಳಿದುಕೊಂಡಿದ್ದೆವು ಎಂದರೆ, ಈ ಸದನದಲ್ಲಿ ಮನೆಯ ಯಜಮಾನರು ಸಭಾಧ್ಯಕ್ಷರಾಗಿದ್ದು, ಅವರು ಈ ಸದನದ ಎಲ್ಲಾ ಸದಸ್ಯರುಗಳಿಗೂ ರಕ್ಷಣೆ ಹಾಗೂ ಎಲ್ಲಾ ತರಹದ ಹಕ್ಕುಗಳನ್ನು ಕೊಡುತ್ತಾರೆಂದು ನಾವು ಭಾವಿಸಿಕೊಂಡಿದ್ದೆವು. ಆದರೆ, ಇಲ್ಲಿ ನೋಡಿದರೆ, ಇವ್ಹೊತ್ತು ಒಬ್ಬ ಹಿರಿಯ ನಾಯಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿರುವಂತಹ ಸಂದರ್ಭದಲ್ಲಿ ಏಕೆ ರಾಜೀನಾಮೆ ಕೊಡುತ್ತಿದ್ದಾರೆಂದು ಅವರಿಗೆ ಆ ಕುರಿತು ಹೇಳುವುದಕ್ಕೂ ತಾವು ಒಂದು ಅವಕಾಶವನ್ನೂ ಕೊಡುತ್ತಿಲ್ಲದಿರುವುದನ್ನು ನೋಡಿದರೆ, ಇಡೀ ಕರ್ನಾಟಕದ ಜನತೆಗೆ ಸ್ವೀಕರ್ ಆಗಿರುವ ತಮ್ಮ ಮೇಲೆ ಸ್ವಲ್ಪ ಅನುಮಾನ, ಸಂಶಯ ಬರುತ್ತಿದೆ. ತಾವು ಇದಕ್ಕೆ ಅವಕಾಶ ಕೊಡದೆ, ದಯವಿಟ್ಟು ಅವರು ಏತಕ್ಕೋಸ್ಕರ ರಾಜೀನಾಮೆ ಕೊಡುತ್ತಿದ್ದಾರೆಂದು ಅವರಿಗೆ ಆ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಹೇಳಿ, ಜನರಲ್ ಆಗಿ ಹೇಳಬೇಡಿ.

(ಅಡಚಣೆ)

ಅಧ್ಯಕ್ಷರು : ನಿಯಮಗಳು ಸ್ಪಷ್ಟವಾಗಿ ಇದೆ. ಅಲ್ಲದೆ.....

(ಅಡಚಣೆ)

ಅಧ್ಯಕ್ಷರು : ಪ್ರತಿಭಟನೆ ಏಕೆ? ಸಿದ್ದರಾಮಯ್ಯನವರೆ, ನಿಯಮಗಳು ಅದರ ವಿರುದ್ಧ ಇರುವುದರಿಂದ ಪ್ರತಿಭಟನೆ ಏಕೆ?

(ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯ, ಬಿ.ಆರ್. ಪಾಟೀಲ್, ಕೆ. ವೆಂಕಟೇಶ್, ವೈಜನಾಥ ಪಾಟೀಲ್ ಆದಿಯಾಗಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಸಭಾಧ್ಯಕ್ಷರ ಪೀಠದತ್ತ ತೆರಳಿ ಮಾತನಾಡುತ್ತಿದ್ದರು, ಕೆಲವು ಮಾನ್ಯ ಸದಸ್ಯರು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು : ನಿಯಮಗಳು ಸ್ಪಷ್ಟವಾಗಿದೆ. ಅಂಥಾದ್ದರಲ್ಲಿ ನಿಯಮಗಳ ವಿರುದ್ಧ ಹೇಗೆ ಈ ಮನೆಯಲ್ಲಿ ನಡೆದುಕೊಳ್ಳುವುದಕ್ಕಾಗುತ್ತದೆ? ಆದ್ದರಿಂದ, ನಿಯಮಗಳನ್ನು ಎತ್ತಿ ಹಿಡಿಯಬೇಕಾದ್ದು ನಮ್ಮ ಕರ್ತವ್ಯ. ನಾವೇ ರಚನೆ ಮಾಡಿಕೊಂಡಿರುವ ನಿಯಮಗಳಿವೆಯಲ್ಲಾ, ಅದನ್ನು ಎತ್ತಿ ಹಿಡಿಯಬೇಕಾಗುತ್ತದೆ.

(ಸಭಾಧ್ಯಕ್ಷರ ಪೀಠದ ಮುಂದೆ ಹಾಗೂ ಬಾವಿಯಲ್ಲಿ ನಿಂತುಕೊಂಡು ಮಾನ್ಯ ಸದಸ್ಯರಾದ ಶ್ರೀ ಸಿದ್ದರಾಮಯ್ಯನವರಾದಿಯಾಗಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಘೋಷಣೆ ಕೂಗುತ್ತಿದ್ದರು).

ಅಧ್ಯಕ್ಷರು : ನಾನು ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತಿದ್ದೇನೆ.

(ಸದನವು 12 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಅರ್ಧ ಗಂಟೆ ಬಳಿಕ ಸೇರುವುದಾಗಿ ತೀರ್ಮಾನಿಸಿತು).

ಸದನವು ಮಧ್ಯಾಹ್ನ 1 ಗಂಟೆ 19 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು.

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು).

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮಾನ್ಯ ಸಿದ್ದರಾಮಯ್ಯನವರಿಗೆ ರಾಜೀನಾಮೆ ನೀಡಲು ಕಾರಣಗಳನ್ನು ತಿಳಿಸಲು ಅನುಮತಿ ಕೋರಿಕೆ.

(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಮಾನ್ಯ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ, ಶ್ರೀ ವೈಜನಾಥ ಪಾಟೀಲ್, ಡಾ: ಹೆಚ್.ಸಿ. ಮಹದೇವಪ್ಪ, ಶ್ರೀ ಹೆಚ್.ವೈ. ಮೇಟಿ, ಶ್ರೀ ಮಹದೇವ್ ಮತ್ತು ಶ್ರೀ ಕೆ. ವೆಂಕಟೇಶ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು).

3. ಪ್ರಕಟಣೆ

ಅಧ್ಯಕ್ಷರು : ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಬಾಲಚಂದ್ರ ಜಾರಕಿಹೊಳಿಯವರು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ.

(ಅಡಚಣೆ)

ಅಧ್ಯಕ್ಷರು : ಮಾನ್ಯ ಸಚಿವರು ಈ ಭೋಜನ ಕೂಟವನ್ನು ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ 1.30 ಗಂಟೆಗೆ ಏರ್ಪಾಡು ಮಾಡಿದ್ದಾರೆ. ಆದ್ದರಿಂದ, ಅದರಲ್ಲಿ ಭಾಗವಹಿಸಬೇಕೆಂದು ನಾನು ಎಲ್ಲಾ ಮಾನ್ಯ ಸದಸ್ಯರನ್ನೂ ಕೋರುತ್ತೇನೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು 3 ಗಂಟೆ 27 ನಿಮಿಷಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಉಪಸ್ಥಿತರಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಮಾನ್ಯ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ಕೋರಿಕೆ.